# ವೃಕ್ಷೋಥಾನ್ ಹೆರಿಟೇಜ್ ರನ್‌ಗೆ ಕೈಜೋಡಿಸೋಣ

**• ವಿಜಯಪುರ:** ನಗರದಲ್ಲಿ ಡಿಸೆಂಬರ್ 22 ರಂದು ನಡೆಯುತ್ತಿರುವ ಐತಿಹಾಸಿಕ ವೃಕ್ಷೋಥಾನ್ ಹೆರಿಟೇಜ್ ರನ್-2024 ರಲ್ಲಿ ಎಲ್ಲರೂ ಪಾಲ್ಗೊಳ್ಳುವ ಮೂಲಕ ಹಸಿರು ವಿಜಯಪುರಕ್ಕೆ ಕೈ ಜೋಡಿಸೋಣ ಎಂದು ಬಿಎಲ್‌ಡಿಇ ಸಂಸ್ಥೆಯ ಮುಖ್ಯ ಸಲಹೆಗಾರ ಮತ್ತು ಡೀಮ್ಡ್ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಡಾ. ಆರ್. ವಿ. ಕುಲಕರ್ಣಿ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ನಾನಾ ಕಾಲೇಜುಗಳ ಪ್ರಾಚಾರ್ಯರು ಮತ್ತು ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಹಸಿರು ನಮ್ಮ ಉಸಿರಾಗಬೇಕು. ಇಲ್ಲಿನ ಪ್ರಾಚಿನ ಸ್ಮಾರಕಗಳು ಹೆಚ್ಚೆಚ್ಚು ಪ್ರಚಾರವಾಗಬೇಕು. ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕು. ಇದರಿಂದ ಪರಿಸರ ಸಮೃದ್ಧಿಯಾಗಿ ಸಾರ್ವಜನಿಕರು ಸದೃಢ ಆರೋಗ್ಯ ಹೊಂದಲು ಹಾಗೂ ಜಿಲ್ಲೆಯ ಜನರ ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿಯಾಗಲು ಅನುಕೂಲವಾಗಲಿದೆ ಎಂದರು.

ನಮ್ಮ ಸಂಸ್ಥೆಯ ಪ್ರತಿಯೊಂದು ಶಾಲೆ, ಕಾಲೇಜುಗಳ ಎಲ್ಲ ಬೋಧಕ, ಬೋದಕರ ಹೊರತಾದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಈ ಐತಿಹಾಸಿಕ ಓಟದಲ್ಲಿ ಪಾಲ್ಗೊಂಡು ಬಸವನಾಡು ಸರ್ವಾಂಗೀಣವಾಗಿ ಸಮೃದ್ಧಿಯಾಗಲುಕೊಡುಗೆ ನೀಡೋಣ. ಈ ಮೂಲಕ ಇತರ ಶಾಲೆ, ಕಾಜೇಜುಗಳೂ ಇದರಲ್ಲಿ ಪಾಲ್ಗೊಳ್ಳಲು ಸ್ಫೂರ್ತಿಯಾಗೋಣ. ಈ ಬಾರಿಯಓಟಕ್ಕೆ ಮತ್ತಷ್ಟು ಮೆರಗು ತರೋಣ ಎಂದರು.

ಈ ಸಂದರ್ಭದಲ್ಲಿ ವೃಕ್ಷೋಥಾನ್ ಹೆರಿಟೇಜ್ ಕೋರ್ ಕಮಿಟಿ ಸಂಚಾಲಕ ಮುರುಗೇಶ ಪಟ್ಟಣಶೆಟ್ಟಿ, ಸಂಸ್ಥೆಯ ಆಡಳಿತಾಧಿಕಾರಿ ವಿಲಾಸ ಬಗಲಿ, ಬಿ.ಆರ್. ಪಾಟೀಲ, ಐ.ಎಸ್. ಕಾಳಪ್ಪನವರ, ಕೋರ್‌ಕಮಿಟಿಯ ಸಂತೋಷ ಓರಸಂಗ, ಸೋಮಶೇಖರ ಸ್ವಾಮಿ, ವೀಣಾ ದೇಶಪಾಂಡಿ ಇದ್ದರು.



**Paper Name : Hosa Diganta Date : 13/11/2024**

# ಹಸಿರು ವಿಜಯಪುರಕ್ಕೆ ಕೈ ಜೋಡಿಸೋಣ

## ಐತಿಹಾಸಿಕ ವೃಕ್ಷೋಥಾನ್ ಹೆರಿಟೇಜ್ ರನ್-2024ರಲ್ಲಿ ಪಾಲ್ಗೊಳ್ಳಿ: ಡಾ.ಆರ್.ವಿ.ಕುಲಕರ್ಣಿ

• **ಕನ್ನಡಪ್ರಭ ವಾರ್ತೆ** ವಿಜಯಪುರ

ನಗರದಲ್ಲಿ ಡಿಸೆಂಬರ್22 ರಂದು ನಡೆಯುತ್ತಿರುವ ಐತಿಹಾಸಿಕ ವೃಕ್ಷೋಥಾನ್ ಹೆರಿಟೇಜ್ ರನ್-2024ರಲ್ಲಿ ಎಲ್ಲರೂ ಪಾಲ್ಗೊಳ್ಳುವ ಮೂಲಕ ಹಸಿರು ವಿಜಯಪುರಕ್ಕೆ ಕೈ. ಜೋಡಿಸೋಣ ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಮುಖ್ಯ ಸಲಹೆಗಾರ ಮತ್ತು ಡೀಮ್ಡ್ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಡಾ.ಆರ್.ವಿ.ಕುಲಕರ್ಣಿ ಹೇಳಿದರು.

ನಗರದ ಬಿ.ಎಲ್.ಡಿ.ಇ ಸಂಸ್ಥೆಯಲ್ಲಿ ಬಿ.ಎಲ್.ಡಿ.ಇ ಸಂಸ್ಥೆಯ ನಾನಾ ಕಾಲೇಜುಗಳ ಪ್ರಾಚಾರ್ಯರು ಮತ್ತು ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಹಸಿರು ನಮ್ಮ ಉಸಿರಾಗಬೇಕು. ಇಲ್ಲಿನ ಪ್ರಾಚಿನ ಸ್ಮಾರಕಗಳು ಹೆಚ್ಚೆಚ್ಚು ಪ್ರಚಾರವಾಗಬೇಕು. ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕು. ಇದರಿಂದ ಪರಿಸರ ಸಮೃದ್ಧಿಯಾಗಿ ಸಾರ್ವಜನಿಕರು ಸದೃಢ ಆರೋಗ್ಯ ಹೊಂದಲು ಹಾಗೂ ಜಿಲ್ಲೆಯ ಜನರ ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿಯಾಗಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ನಮ್ಮ ಸಂಸ್ಥೆಯ ಪ್ರತಿಯೊಂದು ಶಾಲೆ, ಕಾಲೇಜುಗಳ ಎಲ್ಲ ಬೋಧಕ, ಬೋಧಕರ ಹೊರತಾದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಈ ಐತಿಹಾಸಿಕ ಓಟದಲ್ಲಿ ಪಾಲ್ಗೊಂಡು ಬಸವನಾಡು ಸರ್ವಾಂಗೀಣವಾಗಿ ಸಮೃದ್ಧಿಯಾಗಲು ಕೊಡುಗೆ



ನೀಡೋಣ. ಈ ಮೂಲಕ ಇತರ ಶಾಲೆ, ಕಾಜೇಜುಗಳೂ ಇದರಲ್ಲಿ ಪಾಲ್ಗೊಳ್ಳಲು ಸ್ಫೂರ್ತಿಯಾಗೋಣ. ಈ ಬಾರಿಯ ಓಟಕ್ಕೆ ಮತ್ತಷ್ಟು ಮೆರಗು ತರೋಣ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವೃಕ್ಷೋಥಾನ್ ಹೆರಿಟೇಜ್ ಕೋರ್‌ಕಮಿಟಿ ಸಂಚಾಲಕ ಮುರುಗೇಶ ಪಟ್ಟಣಶೆಟ್ಟಿ, ಸಂಸ್ಥೆಯ ಆಡಳಿತಾಧಿಕಾರಿಗಳಾದ ವಿಲಾಸ ಬಗಲಿ, ಬಿ. ಆರ್.ಪಾಟೀಲ, ಐ.ಎಸ್.ಕಾಳಪ್ಪನವರ, ಕೋರ್‌ಕಮಿಟಿಯ ಸಂತೋಷ ಔರಸಂಗ, ಸೋಮಶೇಖರ ಸ್ವಾಮಿ, ವೀಣಾ ದೇಶಪಾಂಡೆ ಮುಂತಾದವರು ಇದ್ದರು.

**PAPER : KANNADA PRABHA Date : 13/11/2024**

# BLDE (DEEMED TO BE UNIVERSITY)

[

**SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA**

**Department of Central Library**


## ವೃಕ್ಷೋಥಾನ್: ಹಸಿರು ವಿಜಯಪುರಕ್ಕೆ ಕೈಜೋಡಿಸಿ



ವಿಜಯಪುರ: ವೃಕ್ಷೋಥಾನ್ ಹೆರಿಟೇಜ್ ರನ್-2024ರ ಹಿನ್ನೆಲೆ ಬಿಎಲ್‌ಡಿಇ ಡೀಮ್ಡ್ ವಿವಿ ರಜಿಸ್ಟ್ರಾರ್ ಡಾ।ಆರ್.ವಿ.ಕುಲಕರ್ಣಿ ಅವರು ಸಂಸ್ಥೆಯ ನಾನಾ ಕಾಲೇಜುಗಳ ಪ್ರಾಚಾರ್ಯರು ಮತ್ತು ಅಧಿಕಾರಿಗಳ ಸಭೆ ನಡೆಸಿದರು.

**■ ಉದಯವಾಣಿ ಸಮಾಚಾರ**

**ವಿಜಯಪುರ:** ನಗರದಲ್ಲಿ ಡಿಸೆಂಬರ್ 22ರಂದು ನಡೆಯುತ್ತಿರುವ ಐತಿಹಾಸಿಕ ವೃಕ್ಷೋಥಾನ್ ಹೆರಿಟೇಜ್ ರನ್-2024ರಲ್ಲಿ ಎಲ್ಲರೂ ಪಾಲ್ಗೊಳ್ಳುವ ಮೂಲಕ ಹಸಿರು ವಿಜಯಪುರಕ್ಕೆ ಕೈಜೋಡಿಸೋಣ ಎಂದು ಬಿಎಲ್‌ಡಿಇ ಸಂಸ್ಥೆ ಮುಖ್ಯ ಸಲಹೆಗಾರ ಮತ್ತು ಡೀಮ್ಡ್ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಡಾ।ಆರ್.ವಿ.ಕುಲಕರ್ಣಿ ಹೇಳಿದರು.

ನಗರದಲ್ಲಿ ನಡೆದ ಸಂಸ್ಥೆಯ ನಾನಾ ಕಾಲೇಜುಗಳ ಪ್ರಾಚಾರ್ಯರು ಮತ್ತು ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಹಸಿರು ನಮ್ಮ ಉಸಿರಾಗಬೇಕು. ಇಲ್ಲಿನ ಪ್ರಾಚೀನ ಸ್ಮಾರಕಗಳು ಹೆಚ್ಚೆಚ್ಚು ಪ್ರಚಾರವಾಗಬೇಕು. ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕು. ಇದರಿಂದ ಪರಿಸರ ಸಮೃದ್ಧಿಯಾಗಿ ಸಾರ್ವಜನಿಕರು ಸದೃಢ ಆರೋಗ್ಯ ಹೊಂದಲು ಹಾಗೂ ಜಿಲ್ಲೆಯ ಜನರ ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿಯಾಗಲು ಅನುಕೂಲವಾಗಲಿದೆ ಎಂದರು.

ನಮ್ಮ ಸಂಸ್ಥೆಯ ಪ್ರತಿಯೊಂದು ಶಾಲೆ, ಕಾಲೇಜುಗಳ ಎಲ್ಲ ಬೋಧಕ, ಬೋಧಕರ ಹೊರತಾದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಈ ಐತಿಹಾಸಿಕ ಓಟದಲ್ಲಿ ಪಾಲ್ಗೊಂಡು ಬಸವನಾಡು ಸರ್ವಾಂಗೀಣವಾಗಿ ಸಮೃದ್ಧಿಯಾಗಲು ಕೊಡುಗೆ ನೀಡೋಣ. ಈ ಮೂಲಕ ಇತರ ಶಾಲೆ, ಕಾಲೇಜುಗಳೂ ಇದರಲ್ಲಿ ಪಾಲ್ಗೊಳ್ಳಲು ಸ್ಫೂರ್ತಿಯಾಗೋಣ. ಈ ಬಾರಿಯ ಓಟಕ್ಕೆ ಮತ್ತಷ್ಟು ಮೆರಗು ತರೋಣ ಎಂದು ಹೇಳಿದರು.

ವೃಕ್ಷೋಥಾನ್ ಹೆರಿಟೇಜ್ ಕೋರ್ ಕಮಿಟಿ ಸಂಚಾಲಕ ಮುರುಗೇಶ ಪಟ್ಟಣಶೆಟ್ಟಿ, ಸಂಸ್ಥೆಯ ಆಡಳಿತಾಧಿಕಾರಿಗಳಾದ ವಿಲಾಸ ಬಗಲಿ, ಬಿ.ಆರ್.ಪಾಟೀಲ, ಐ.ಎಸ್.ಕಾಳಪ್ಪನವರ, ಕೋರ್ ಕಮಿಟಿಯ ಸಂತೋಷ ಔರಸಂಗ, ಸೋಮಶೇಖರ ಸ್ವಾಮಿ, ವೀಣಾ ದೇಶಪಾಂಡೆ, ಪ್ರಾಚಾರ್ಯರು, ಅಧಿಕಾರಿಗಳು ಇದ್ದರು.

**PAPER : UDAYA VANI  DATE : 13/11/2024**



## ವೃಕ್ಷೋಥಾನ್ ಹೆರಿಟೇಜ್ ರನ್ ಡಿ. 22 ಕ್ಕೆ

ವಿಜಯಪುರ: ನಗರದಲ್ಲಿ ಡಿಸೆಂಬರ್ 22 ರಂದು ನಡೆಯುತ್ತಿರುವ ಐತಿಹಾಸಿಕ ವೃಕ್ಷೋಥಾನ್ ಹೆರಿಟೇಜ್ ರನ್-2024ರಲ್ಲಿ ಎಲ್ಲರೂ ಪಾಲ್ಗೊಳ್ಳುವ ಮೂಲಕ ಹಸಿರು ವಿಜಯಪುರಕ್ಕೆ ಕೈ ಜೋಡಿಸೋಣ ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಮುಖ್ಯ ಸಲಹೆಗಾರ ಮತ್ತು ಡೀಮ್ಡ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ. ಆರ್. ವಿ. ಕುಲಕರ್ಣಿ ಹೇಳಿದ್ದಾರೆ.

ಸೋಮವಾರ ಮುಸ್ಸಂಜೆ ನಡೆದ ಸಂಸ್ಥೆಯ ನಾನಾ ಕಾಲೇಜುಗಳ ಪ್ರಾಚಾರ್ಯರು ಮತ್ತು ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಹಸಿರು ನಮ್ಮ ಉಸಿರಾಗಬೇಕು. ಇಲ್ಲಿನ ಪ್ರಾಚಿನ ಸ್ಮಾರಕಗಳು ಹೆಚ್ಚೆಚ್ಚು ಪ್ರಚಾರವಾಗಬೇಕು. ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕು. ಇದರಿಂದ ಪರಿಸರ ಸಮೃದ್ಧಿಯಾಗಿ ಸಾರ್ವಜನಿಕರು ಸದೃಢ ಆರೋಗ್ಯ ಹೊಂದಲು ಹಾಗೂ ಜಿಲ್ಲೆಯ ಜನರ ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿಯಾಗಲು ಅನುಕೂಲವಾಗಲಿದೆ ಎಂದು ಅವರು ಹೇಳಿದರು.

ನಮ್ಮ ಸಂಸ್ಥೆಯ ಪ್ರತಿಯೊಂದು ಶಾಲೆ, ಕಾಲೇಜುಗಳ ಎಲ್ಲ ಬೋಧಕ, ಬೋಧಕರ ಹೊರತಾದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಈ ಐತಿಹಾಸಿಕ ಓಟದಲ್ಲಿ ಪಾಲ್ಗೊಂಡು ಬಸವನಾಡು ಸರ್ವಾಂಗೀಣವಾಗಿ ಸಮೃದ್ಧಿಯಾಗಲು ಕೊಡುಗೆ ನೀಡೋಣ. ಈ ಮೂಲಕ ಇತರ ಶಾಲೆ, ಕಾಜೇಜುಗಳೂ ಇದರಲ್ಲಿ ಪಾಲ್ಗೊಳ್ಳಲು ಸ್ಫೂರ್ತಿಯಾಗೋಣ. ಈ ಬಾರಿಯ ಓಟಕ್ಕೆ ಮತ್ತಷ್ಟು ಮೆರಗು ತರೋಣ ಎಂದು ಹೇಳಿದರು.

ನಾನಾ ಕಾಲೇಜುಗಳ ಪ್ರಾಚಾರ್ಯರು ಮತ್ತು ಅಧಿಕಾರಿಗಳ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ವೃಕ್ಷೋಥಾನ್ ಹೆರಿಟೇಜ್ ಕೋರ್ ಕಮಿಟಿ ಸಂಚಾಲಕ ಮುರುಗೇಶ ಪಟ್ಟಣಶೆಟ್ಟಿ, ಸಂಸ್ಥೆಯ ಆಡಳಿತಾಧಿಕಾರಿಗಳಾದ ವಿಲಾಸ ಬಗಲಿ, ಬಿ. ಆರ್. ಪಾಟೀಲ, ಐ. ಎಸ್. ಕಾಳಪ್ಪನವರ, ಕೋರ್ ಕಮಿಟಿಯ ಸಂತೋಷ ಔರಸಂಗ, ಸೋಮಶೇಖರ ಸ್ವಾಮಿ, ವೀಣಾ ದೇಶಪಾಂಡಿ, ಬಿ.ಎಲ್.ಡಿ.ಇ ಸಂಸ್ಥೆಯ ನಾನಾ ಕಾಲೇಜುಗಳ ಪ್ರಾಚಾರ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

**PAPER : VISHWA VANI**

**DATE : 13/11/2024**

# BLDE (DEEMED TO BE UNIVERSITY)

[

**SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA**

**Department of Central Library**

## ಹಸಿರು ವಿಜಯಪುರಕ್ಕೆ ಕೈಜೋಡಿಸೋಣ

**ವಿಕ ಸುದ್ದಿಲೋಕ** ವಿಜಯಪುರ

"ನಗರದಲ್ಲಿ ಡಿ.22ರಂದು ನಡೆಯುತ್ತಿರುವ ಐತಿಹಾಸಿಕ ವೃಕ್ಷೋಥಾನ್ ಹೆರಿಟೇಜ್ ರನ್-2024ರಲ್ಲಿ ಎಲ್ಲರೂ ಪಾಲ್ಗೊಳ್ಳುವ ಮೂಲಕ ಹಸಿರು ವಿಜಯಪುರಕ್ಕೆ ಕೈಜೋಡಿಸೋಣ," ಎಂದು ಬಿಎಲ್‌ಡಿಇ ಸಂಸ್ಥೆಯ ಮುಖ್ಯ ಸಲಹೆಗಾರ ಮತ್ತು ಡೀಮ್ಡ್ ವಿವಿಯ ರಜಿಸ್ಟ್ರಾರ್ ಡಾ.ಆರ್.ವಿ.ಕುಲಕರ್ಣಿ ಹೇಳಿದರು.

ನಗರದಲ್ಲಿ ಬಿಎಲ್‌ಡಿಇ ಸಂಸ್ಥೆಯ ನಾನಾ ಕಾಲೇಜ್‌ಗಳ ಪ್ರಾಚಾರ್ಯರು ಮತ್ತು ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು.

"ಹಸಿರು ನಮ್ಮ ಉಸಿರಾಗಬೇಕು. ಇಲ್ಲಿನ ಪ್ರಾಚಿನ ಸ್ಮಾರಕಗಳು ಹೆಚ್ಚೆಚ್ಚು ಪ್ರಚಾರವಾಗಬೇಕು. ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕು. ಇದರಿಂದ ಪರಿಸರ ಸಮೃದ್ಧಿಯಾಗಿ ಸಾರ್ವಜನಿಕರು ಸದೃಢ ಆರೋಗ್ಯ ಹೊಂದಲು ಹಾಗೂ ಜಿಲ್ಲೆಯ ಜನರ ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿಯಾಗಲು ಅನುಕೂಲವಾಗಲಿದೆ," ಎಂದರು.

"ನಮ್ಮ ಸಂಸ್ಥೆಯ ಪ್ರತಿಯೊಂದು ಶಾಲೆ, ಕಾಲೇಜ್‌ಗಳ ಎಲ್ಲ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಈ ಐತಿಹಾಸಿಕ ಓಟದಲ್ಲಿ ಪಾಲ್ಗೊಂಡು ಬಸವನಾಡು ಸರ್ವಾಂಗೀಣವಾಗಿ ಸಮೃದ್ಧಿಯಾಗಲು ಕೊಡುಗೆ ನೀಡೋಣ. ಈ ಮೂಲಕ ಇತರ ಶಾಲೆ, ಕಾಲೇಜುಗಳೂ ಇದರಲ್ಲಿ ಪಾಲ್ಗೊಳ್ಳಲು ಸ್ಫೂರ್ತಿಯಾಗೋಣ. ಈ ಬಾರಿಯ ಓಟಕ್ಕೆ ಮತ್ತಷ್ಟು ಮೆರಗು ತರೋಣ," ಎಂದರು.

ವೃಕ್ಷೋಥಾನ್ ಹೆರಿಟೇಜ್ ಕೋರ್ ಕಮಿಟಿ ಸಂಚಾಲಕ ಮುರುಗೇಶ ಪಟ್ಟಣಶೆಟ್ಟಿ, ಸಂಸ್ಥೆಯ ಆಡಳಿತಾಧಿಕಾರಿ ವಿಲಾಸ ಬಗಲಿ, ಬಿ.ಆರ್.ಪಾಟೀಲ, ಐ.ಎಸ್.ಕಾಳಪ್ಪನವರ, ಕೋರ್ ಕಮಿಟಿಯ ಸಂತೋಷ ಔರಸಂಗ, ಸೋಮಶೇಖರ ಸ್ವಾಮಿ, ವೀಣಾ ದೇಶಪಾಂಡೆ, ಬಿಎಲ್‌ಡಿಇ ಸಂಸ್ಥೆಯ ನಾನಾ ಕಾಲೇಜ್‌ಗಳ ಪ್ರಾಚಾರ್ಯರು, ಅಧಿಕಾರಿಗಳಿದ್ದರು.



ವಿಜಯಪುರದಲ್ಲಿ ಡಿ.22ರಂದು ನಡೆಯಲಿರುವ ವೃಕ್ಷೋಥಾನ್ ಹೆರಿಟೇಜ್ ರನ್-2024 ಹಿನ್ನೆಲೆಯಲ್ಲಿ ಬಿಎಲ್‌ಡಿಇ ಸಂಸ್ಥೆಯ ನಾನಾ ಕಾಲೇಜ್‌ಗಳ ಪ್ರಾಚಾರ್ಯರು ಮತ್ತು ಅಧಿಕಾರಿಗಳ ಸಭೆ ನಡೆಯಿತು.

**PAPER : VIJAY KARNATAKA**

**DATE : 13/11/2024**

# BLDE (DEEMED TO BE UNIVERSITY)

## SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA

**Department of Central Library**



ವಿಜಯಪುರ ನಗರದಲ್ಲಿ ಡಿ.22 ರಂದು ನಡೆಯಲಿರುವ ವೃಕ್ಷೋಥಾನ್ ಹೆರಿಟೇಜ್ ರನ್ ಪೂರ್ವಭಾವಿ ಸಭೆಯಲ್ಲಿ ಸೋಮವಾರ ಬಿ.ಎಲ್‌.ಡಿ.ಇ ಸಂಸ್ಥೆಯ ಮುಖ್ಯ ಸಲಹೆಗಾರ ಆರ್‌.ವಿ.ಕುಲಕರ್ಣಿ ಮಾತನಾಡಿದರು. ಮುರಗೇಶ ಪಟ್ಟಣಶೆಟ್ಟಿ, ವಿಲಾಸ ಬಗಲಿ, ಬಿ.ಆರ್‌. ಪಾಟೀಲ, ಆಯ್‌.ಎಸ್‌. ಕಾಳಪ್ಪನವರ ಪಾಲ್ಗೊಂಡಿದ್ದರು

## ‘ಹಸಿರು ವಿಜಯಪುರಕ್ಕೆ ಕೈ ಜೋಡಿಸಿ’

ಪ್ರಜಾವಾಣಿ ವಾರ್ತೆ

ವಿಜಯಪುರ: ನಗರದಲ್ಲಿ ಡಿ.22 ರಂದು ನಡೆಯಲಿರುವ ವೃಕ್ಷೋಥಾನ್ ಹೆರಿಟೇಜ್ ರನ್-2024ರಲ್ಲಿ ಎಲ್ಲರೂ ಭಾಗವಹಿಸಿ ಹಸಿರು ವಿಜಯಪುರಕ್ಕೆ ಕೈ ಜೋಡಿಸಬೇಕು ಎಂದು ಬಿ.ಎಲ್‌.ಡಿ.ಇ ಸಂಸ್ಥೆಯ ಮುಖ್ಯ ಸಲಹೆಗಾರ ಆರ್‌. ವಿ.ಕುಲಕರ್ಣಿ ಹೇಳಿದರು.

ನಗರದಲ್ಲಿ ಸೋಮವಾರ ನಡೆದ ವಿವಿಧ ಸಂಸ್ಥೆಯ ಕಾಲೇಜುಗಳ ಪ್ರಾಚಾರ್ಯರು ಮತ್ತು ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಹಸಿರು ನಮ್ಮ ಉಸಿರಾಗಬೇಕು. ಇಲ್ಲಿನ ಪ್ರಾಚೀನ ಸ್ಮಾರಕಗಳು ಹೆಚ್ಚೆಚ್ಚು ಪ್ರಚಾರವಾಗಬೇಕು. ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕು ಎಂದರು.

ಪರಿಸರ ಸಮೃದ್ಧಿಯಾಗಿ ಸಾರ್ವಜನಿಕರು ಸದೃಢ ಆರೋಗ್ಯ ಹೊಂದಲು ಹಾಗೂ ಜಿಲ್ಲೆಯ ಜನರು ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿಯಾಗಲು ವೃಕ್ಷೋಥಾನ್ ಹೆರಿಟೇಜ್ ರನ್ ಅನುಕೂಲವಾಗಲಿದೆ ಎಂದರು.

ಬಿಎಲ್‌ಡಿಇ ಸಂಸ್ಥೆಯ ಪ್ರತಿ ಶಾಲೆ, ಕಾಲೇಜುಗಳ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ವೃಕ್ಷೋಥಾನ್ ಹೆರಿಟೇಜ್ ಕೋರ್ ಕಮಿಟಿ ಸಂಚಾಲಕ ಮುರುಗೇಶ ಪಟ್ಟಣಶೆಟ್ಟಿ, ಸಂಸ್ಥೆಯ ಆಡಳಿತಾಧಿಕಾರಿ ವಿಲಾಸ ಬಗಲಿ, ಬಿ.ಆರ್‌.ಪಾಟೀಲ, ಐ.ಎಸ್‌.ಕಾಳಪ್ಪನವರ, ಕೋರ್ ಕಮಿಟಿಯ ಸಂತೋಷ ಔರಸಂಗ, ಸೋಮಶೇಖರ ಸ್ವಾಮಿ, ವೀಣಾ ದೇಶಪಾಂಡೆ ಇದ್ದರು.

13/11/24

**PAPER : PRAJA VANI**

**DATE : 13/11/2024**

# BLDE (DEEMED TO BE UNIVERSITY)

[

**SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA**

**Department of Central Library**

# ಮಧುಮೇಹಿಗಳ ಪಾದರೋಗ ತಪಾಸಣಾ, ಚಿಕಿತ್ಸಾ ಶಿಬಿರ

ವಿಜಯಪುರ : ಮಧುಮೇಹಿಗಳು ಪಾದಗಳ ನಿರ್ಲಕ್ಷ್ಯ ಮಾಡಬಾರದು ಎಂದು ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ ಕೋಟೆಣ್ಣವರ ಹೇಳಿದ್ದಾರೆ.

ವಿಶ್ವಮಧುಮೇಹ ದಿನಾಚರಣೆ ಅಂಗವಾಗಿ ವಿಭಾಗದ ವತಿಯಿಂದ ಮತ್ತು ವಿಜಯಪುರ ಜಿಲ್ಲಾ ಶಸ್ತ್ರಚಿಕಿತ್ಸಕರ ಸಂಘದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಉಚಿತ ಮಧುಮೇಹ ಪಾದರೋಗಗಳ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ ಸಪ್ತಾಹದ ಅಂಗವಾಗಿ ಸಮಾರೋಪದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮಧುಮೇಹಿಗಳು ತಮ್ಮ ರಕ್ತದಲ್ಲಿನ ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳದಿದ್ದರೆ, ದೀರ್ಘಕಾಲೀನ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದರು.

ನರಗಳ ದೌರ್ಬಲ್ಯತೆಯಿಂದ ಸ್ಪರ್ಶ ಜ್ಞಾನ ಕಳೆದುಕೊಳ್ಳಬೇಕಾಗುತ್ತದೆ. ಕಾಲುಗಳು ಶಕ್ತಿಹೀನವಾಗಿ, ಚರ್ಮ ಕೂಡ ಒಣಗಬಹುದು. ಅಲ್ಲದೇ, ಸೋಂಕಿನ ಸಾಧ್ಯತೆ ಹೆಚ್ಚಾಗಿರುವುದರಿಂದ ಮಧುಮೇಹರೋಗಿಗಳು ಎಚ್ಚರಿಕೆವಹಿಸಬೇಕಾಗಿದೆ. ಪ್ರತಿವರ್ಷ ಸರಾಸರಿ ಶೇ. 15 ರಷ್ಟು ಮಧುಮೇಹಿಗಳು ಪಾದದ ಸಮಸ್ಯೆಯಿಂದ ಬಳಲುತ್ತಾರೆ. ಪಾದಗಳ ನಿರ್ಲಕ್ಷ್ಯ ವಹಿಸಿದರೆ ಪಾದ ಕಾಲನ್ನು ಕಳೆದುಕೊಂಡು ಅಂಗವಿಕಲತೆ ಉಂಟಾಗಬಹುದು ಎಂದು ಅವರು ಎಚ್ಚರಿಕೆ ನೀಡಿದರು.

ಬಿಎಲ್‌ಡಿಇ. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ ಮಾತನಾಡಿ, ಮಧುಮೇಹಿಗಳು ನಿಯಮಿತವಾಗಿ ಪಥ್ಯಾಹಾರ ಸೇವನೆ ಮಾಡಬೇಕು.

ನಿಯಮಿತವಾಗಿ ವ್ಯಾಯಾಮ, ಔಷಧಿ ಸೇವನೆ ಮತ್ತು ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ರಕ್ತದಲ್ಲಿನ ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಬಿಎಲ್‌ಡಿಇ. ಆಸ್ಪತ್ರೆಯಲ್ಲಿ ಮಧುಮೇಹಿಗಳಿಗೆ ಅವಶ್ಯವಿರುವ ಎಲ್ಲ ತಜ್ಞ ವೈದ್ಯರು ಮತ್ತು ಚಿಕಿತ್ಸೆ ಸೌಕರ್ಯಗಳು ಲಭ್ಯವಿದ್ದು ವಿಜಯಪುರ ಜಿಲ್ಲೆ ಮತ್ತು ಸುತ್ತಮುತ್ತಲಿನ ಜನರು ಇದರ ಸದುಪಯೋಗ ಪಡೆಯಬೇಕು ಎಂದು ಹೇಳಿದರು.

ಬಿಎಲ್‌ಡಿಇ. ಡೀಮ್ಡ್ ವಿಶ್ವವಿದ್ಯಾಲಯದ ಡೀನ್ ಫ್ಯಾಕಲ್ಟಿ ಆಫ್ ಮೆಡಿಸಿನ್ ಡಾ. ತೇಜಸ್ವಿನಿ ವಲ್ಲಭ, ಉಪಪ್ರಾಚಾರ್ಯ ಡಾ. ಎಂ. ಬಿ. ಪಾಟೀಲ, ವಿಜಯಪುರ ಜಿಲ್ಲಾ ಶಸ್ತ್ರಚಿಕಿತ್ಸಕರ ಸಂಘದ ಕಾರ್ಯದರ್ಶಿ ಡಾ. ರಮಾಕಾಂತ ಬಳೂರಕರ, ಪ್ರಾಧ್ಯಾಪಕಿ ಡಾ. ವಿಜಯಾ ಪಾಟೀಲ, ಸಹಪ್ರಾಧ್ಯಾಪಕ ಡಾ ದೀಪಕ ಚವ್ಹಾಣ, ಡಾ. ಸಂಜೀವ ರಾಠೋಡ, ಡಾ. ಪ್ರದೀಪ ಜಾಬು, ಡಾ. ಮಂಜುನಾಥ ಸಾವಂತ, ಡಾ. ವೀಣಾ ಘಂಟೆಪ್ಪಗೋಳ, ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಾದ ಡಾ. ಈಶ್ವರ, ಡಾ. ಶ್ರೀಯಾ, ಡಾ. ಸ್ಮಿತ್ ಉಪಸ್ಥಿತರಿದ್ದರು.

ಒಂದು ವಾರ ನಡೆದ ಈ ಶಿಬಿರದಲ್ಲಿ ಸುಮಾರು ಇನ್ನೂರಕ್ಕೂ ಹೆಚ್ಚು ಮಧುಮೇಹಿಗಳ ಆರೋಗ್ಯ ತಪಾಸಣೆ, ಉಚಿತ ಸಲಹೆ ಮತ್ತು ಚಿಕಿತ್ಸೆ ನೀಡಲಾಯಿತು. ರಕ್ತದಲ್ಲಿನ ಸಕ್ಕರೆ ಅಂಶ ತಪಾಸಣೆ, ಮೋನೊಫಿಲಾಮೆಂಟ ಟೆಸ್ಟ್, ಬಯೋಥಿಸಿಯೋಮೀಟರ್ ಟೆಸ್ಟ್, ಹ್ಯಾಂಡ್ ಹೆಲ್ಡ್ ಡಾಪ್ಲರ್, ಹ್ಯಾರಿಸ್ ಮ್ಯಾಟ್ ಇಂಪ್ರೆಷನ್‌ಗಳಂಥ ವಿಶೇಷ ತಪಾಸಣೆಗಳನ್ನು ಉಚಿತವಾಗಿ ಮಾಡಲಾಯಿತು. 10 ಜನ ಮಧುಮೇಹಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಳ್ಳಲಾಯಿತು.



ವಿಜಯಪುರದಲ್ಲಿ ಮಧುಮೇಹಿಗಳ ಪಾದರೋಗಗಳ ಕುರಿತಾದ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರ ನಡೆಯಿತು.

**DATE : 14/11/2024**

# ಪಾದರೋಗಗಳ ನಿರ್ಲಕ್ಷ್ಯ ಸಲ್ಲ: ಡಾ। ಕೋಟೆಣ್ಣವರ

## ಉಚಿತ ತಪಾಸಣೆ-ಚಿಕಿತ್ಸಾ ಶಿಬಿರ ಸಪ್ತಾಹ ಸಮಾರೋಪ ■ ನರ ದೌರ್ಬಲ್ಯ: ಮಧುಮೇಹಿಗಳಲ್ಲಿರಲಿ ಎಚ್ಚರ

■ **ಉದಯವಾಣಿ ಸಮಾಚಾರ**



ವಿಜಯಪುರ: ನಗರದಲ್ಲಿ ನಡೆದ ಮಧುಮೇಹ ಪಾದರೋಗಗಳ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸಪ್ತಾಹದಲ್ಲಿ ಡಾ। ಮಂಜುನಾಥ ಕೋಟೆಣ್ಣವರ ಮಾತನಾಡಿದರು.

**ವಿಜಯಪುರ:** ಮಧುಮೇಹಿಗಳು ಪಾದಗಳ ನಿರ್ಲಕ್ಷ್ಯ ಮಾಡಬಾರದು ಎಂದು ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ.ಎಂ. ಪಾಟೀಲ ವೈದ್ಯಕೀಯ ಮಹಾ ವಿದ್ಯಾಲಯದ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ। ಮಂಜುನಾಥ ಕೋಟೆಣ್ಣವರ ಹೇಳಿದರು.

ನಗರದ ಶ್ರೀ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ವಿಜಯಪುರ ಜಿಲ್ಲಾ ಶಸ್ತ್ರಚಿಕಿತ್ಸಕರ ಸಂಘದ ಸಹಯೋಗದಲ್ಲಿ ಮಧುಮೇಹ ಪಾದರೋಗಗಳ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸಪ್ತಾಹ ನಿಮಿತ್ತ ನಡೆದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಧುಮೇಹಿಗಳು ರಕ್ತದಲ್ಲಿನ ಸಕ್ಕರೆ ಅಂಶ ನಿಯಂತ್ರಣದಲ್ಲಿ ಇಟ್ಟುಕೊಳ್ಳದಿದ್ದರೆ ದೀರ್ಘಕಾಲೀನ ಸಮಸ್ಯೆಗಳಾದ ರೆಟಿನೊಪತಿ (ದೃಷ್ಟಿಹೀನತೆ), ನೆಫ್ರೋಪತಿ (ಕಿಡ್ನಿ ತೊಂದರೆ) ಮತ್ತು ನ್ಯೂರೋಪತಿ (ನರಗಳ ದೌರ್ಬಲ್ಯ) ಗಳಿಂದ ಬಳಲಬೇಕಾಗುತ್ತದೆ. ನರಗಳ ದೌರ್ಬಲ್ಯತೆಯಿಂದ ಸ್ಪರ್ಶ ಜ್ಞಾನ ಕಳೆದುಕೊಳ್ಳಬೇಕಾಗುತ್ತದೆ.ಕಾಲುಗಳು ಶಕ್ತಿಹೀನವಾಗಿ ಚರ್ಮ ಕೂಡ ಒಣಗಬಹುದು. ಅಲ್ಲದೇ, ಸೋಂಕಿನ ಸಾಧ್ಯತೆ ಹೆಚ್ಚಾಗಿರುವುದರಿಂದ ಮಧುಮೇಹ ರೋಗಿಗಳು ಎಚ್ಚರಿಕೆ ವಹಿಸಬೇಕು. ಪ್ರತಿ ವರ್ಷ ಸರಾಸರಿ ಶೇ.15 ಮಧುಮೇಹಿಗಳು ಪಾದದ ಸಮಸ್ಯೆಯಿಂದ ಬಳಲುತ್ತಾರೆ. ಪಾದಗಳ ನಿರ್ಲಕ್ಷ್ಯ ವಹಿಸಿದರೆ ಪಾದ-ಕಾಲು ಕಳೆದುಕೊಂಡು ಅಂಗವಿಕಲತೆ ಉಂಟಾಗಬಹುದು ಎಂದು ಎಚ್ಚರಿಕೆ ನೀಡಿದರು.

ಬಿಎಲ್‌ಡಿಇ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ। ರಾಜೇಶ ಹೊನ್ನುಟಗಿ ಮಾತನಾಡಿ, ಮಧುಮೇಹಿಗಳು ನಿಯಮಿತ ಪಥ್ಯಾಹಾರ ಸೇವನೆ ಮಾಡಬೇಕು. ನಿಯಮಿತ ವ್ಯಾಯಾಮ, ಔಷಧ ಸೇವನೆ ಮತ್ತು ವೈದ್ಯರಿಂದತಪಾಸಣೆಮಾಡಿಸಿಕೊಂಡು ರಕ್ತದಲ್ಲಿನ ಸಕ್ಕರೆ ಅಂಶ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಿಎಲ್‌ಡಿಇ ಡೀಮ್ಡ್ ವಿವಿಯ ಡೀನ್ ಫ್ಯಾಕಲ್ಟಿ ಆಫ್ ಮೆಡಿಸಿನ್ ಡಾ। ತೇಜಸ್ವಿನಿ ವಲ್ಲಭ, ಉಪ ಪ್ರಾಚಾರ್ಯ ಡಾ। ಎಂ.ಬಿ. ಪಾಟೀಲ, ಜಿಲ್ಲಾ ಶಸ್ತ್ರಚಿಕಿತ್ಸಕರ ಸಂಘದ ಕಾರ್ಯದರ್ಶಿ ಡಾ। ರಮಾಕಾಂತ ಬಳೂರಕರ, ಪ್ರಾಧ್ಯಾಪಕಿ ಡಾ। ವಿಜಯಾ ಪಾಟೀಲ, ಸಹ ಪ್ರಾಧ್ಯಾಪಕ ಡಾ। ದೀಪಕ ಚವ್ಹಾಣ, ಡಾ। ಸಂಜೀವ ರಾಠೋಡ, ಡಾ। ಪ್ರದೀಪ ಜಾಜು, ಡಾ। ಮಂಜುನಾಥ ಸಾವಂತ, ಡಾ। ವೀಣಾ ಘಂಟೆಪ್ಪಗೋಳ, ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಾದ ಡಾ। ಈಶ್ವರ, ಡಾ। ಶ್ರೀಯಾ, ಡಾ। ಸ್ಮಿತ್ ಸೇರಿದಂತೆ ಇತರರು ಇದ್ದರು.

ಒಂದು ವಾರ ನಡೆದ ಶಿಬಿರದಲ್ಲಿ ಸುಮಾರು 200ಕ್ಕೂ ಹೆಚ್ಚು ಮಧುಮೇಹಿಗಳ ಆರೋಗ್ಯ ತಪಾಸಣೆ, ಉಚಿತ ಸಲಹೆ-ಚಿಕಿತ್ಸೆ ನೀಡಲಾಯಿತು. ರಕ್ತದಲ್ಲಿನ ಸಕ್ಕರೆ ಅಂಶ ತಪಾಸಣೆ, ಮೋನೊಫಿಲಾಮೆಂಟ್ ಟೆಸ್ಟ್, ಬಯೋಥಿಸಿಯೋಮೀಟರ್ ಟೆಸ್ಟ್, ಹ್ಯಾಂಡ್ ಹೆಲ್ಡ್ ಡಾಪ್ಲರ್, ಹ್ಯಾರಿಸ್ ಮ್ಯಾಟ್ ಇಂಪ್ರೆಷನ್‌ಗಳಂಥ ವಿಶೇಷ ತಪಾಸಣೆ ಉಚಿತವಾಗಿ ಮಾಡಲಾಯಿತು.

10 ಜನ ಮಧುಮೇಹಿಗಳನ್ನು ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಳ್ಳಲಾಯಿತು.

**PAPER NAME UDAYA VANI DATE : 14/11/2024**

# ಸಕ್ಕರೆ ಅಂಶ ನಿಯಂತ್ರಣಕ್ಕೆ ಆದ್ಯತೆ ನೀಡಿ

**ವಿಕ ಸುದ್ದಿಲೋಕ** ವಿಜಯಪುರ

''ಮಧುಮೇಹಿಗಳು ಪಾದಗಳನ್ನು ನಿರ್ಲಕ್ಷ್ಯ ಮಾಡಬಾರದು,'' ಎಂದು ಬಿಎಲ್‌ಡಿಇ ಡೀಮ್ಡ್ ವಿವಿಯ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಮಂಜುನಾಥ ಕೋಟೆಣ್ಣವರ ಹೇಳಿದರು.

ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ವಿಭಾಗದ ವತಿಯಿಂದ ಮತ್ತು ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಉಚಿತ ಮಧುಮೇಹ ಪಾದರೋಗಗಳ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

''ಮಧುಮೇಹಿಗಳು ತಮ್ಮ ರಕ್ತದಲ್ಲಿನ ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳದಿದ್ದರೆ, ದೀರ್ಘಕಾಲೀನ ಸಮಸ್ಯೆಗಳಾದ ರೆಟಿನೊಪತಿ (ದೃಷ್ಟಿಹೀನತೆ), ನೆಫ್ರೋಪಥಿ (ಕಿಡ್ನಿತೊಂದರೆ) ಮತ್ತು ನ್ಯೂರೊಪಥಿ (ನರಗಳ ದೌರ್ಬಲ್ಯ)ಗಳಿಂದ ಬಳಲಬೇಕಾಗುತ್ತದೆ. ನರಗಳ ದೌರ್ಬಲ್ಯತೆಯಿಂದ ಸ್ಪರ್ಶಜ್ಞಾನ ಕಳೆದುಕೊಳ್ಳಬೇಕಾಗುತ್ತದೆ. ಕಾಲುಗಳು ಶಕ್ತಿಹೀನವಾಗಿ, ಚರ್ಮ ಕೂಡ ಒಣಗಬಹುದು. ಅಲ್ಲದೆ, ಸೋಂಕಿನ ಸಾಧ್ಯತೆ ಹೆಚ್ಚಾಗಿರುವುದರಿಂದ ಮಧುಮೇಹ ರೋಗಿಗಳು ಎಚ್ಚರಿಕೆ ವಹಿಸಬೇಕಾಗಿದೆ,'' ಎಂದರು.

ಬಿಎಲ್‌ಡಿಇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ರಾಜೇಶ ಹೊನ್ನುಟಗಿ ಮಾತನಾಡಿ, ''ಮಧುಮೇಹಿಗಳು ನಿಯಮಿತವಾಗಿ ಪಥ್ಯಾಹಾರ ಸೇವನೆ ಮಾಡಬೇಕು. ನಿಯಮಿತವಾಗಿ ವ್ಯಾಯಮ, ಔಷಧಿ ಸೇವನೆ ಮತ್ತು ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ರಕ್ತದಲ್ಲಿನ ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು,'' ಎಂದರು.



ವಿಜಯಪುರದಲ್ಲಿ ಬಿಎಲ್‌ಡಿಇ ಡೀಮ್ಡ್ ವಿವಿಯ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆದ ಉಚಿತ ಮಧುಮೇಹ ಪಾದರೋಗಗಳ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸಪ್ತಾಹದ ಸಮಾರೋಪದಲ್ಲಿ ಡಾ.ಮಂಜುನಾಥ ಕೋಟೆಣ್ಣವರ ಮಾತನಾಡಿದರು.

**ಪ್ರತಿ ವರ್ಷ ಸರಾಸರಿ ಶೇ. 15 ರಷ್ಟು ಮಧುಮೇಹಿಗಳು ಪಾದದ ಸಮಸ್ಯೆಯಿಂದ ಬಳಲುತ್ತಾರೆ. ಪಾದಗಳ ನಿರ್ಲಕ್ಷ್ಯ ವಹಿಸಿದರೆ ಪಾದ ಕಾಲನ್ನು ಕಳೆದುಕೊಂಡು ವಿಶೇಷಚೇತನತೆ ಉಂಟಾಗಬಹುದು.**

**ಡಾ.ಮಂಜುನಾಥ ಕೋಟೆಣ್ಣವರ**

ಬಿಎಲ್‌ಡಿಇ ಡೀಮ್ಡ್ ವಿವಿಯ ಡೀನ್ ಫ್ಯಾಕಲ್ಟಿ ಆಫ್ ಮೆಡಿಸಿನ್ ಡಾ. ತೇಜಸ್ವಿನಿ ವಲ್ಲಭ, ಉಪಪ್ರಾಚಾರ್ಯ ಡಾ.ಎಂ.ಬಿ. ಪಾಟೀಲ, ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘದ ಕಾರ್ಯದರ್ಶಿ ಡಾ. ರಮಾಕಾಂತ ಬಳೂರಕರ, ಪ್ರಾಧ್ಯಾಪಕಿ ಡಾ. ವಿಜಯಾ ಪಾಟೀಲ, ಸಹಪ್ರಾಧ್ಯಾಪಕ ಡಾ.ದೀಪಕ ಚವ್ಹಾಣ, ಡಾ.ಸಂಜೀವ ರಾಠೋಡ, ಡಾ.ಪ್ರದೀಪ ಜಾಜು, ಡಾ.ಮಂಜುನಾಥ ಸಾವಂತ, ಡಾ.ವೀಣಾ ಘಂಟೆಪ್ಪಗೋಳ, ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಾದ ಡಾ.ಈಶ್ವರ, ಡಾ.ಶ್ರೀಯಾ, ಡಾ.ಸ್ಮಿತ್ ಇದ್ದರು.

ಒಂದು ವಾರ ನಡೆದ ಈ ಶಿಬಿರದಲ್ಲಿ ಸುಮಾರು ಇನ್ನೂರಕ್ಕೂ ಹೆಚ್ಚು ಮಧುಮೇಹಿಗಳ ಆರೋಗ್ಯ ತಪಾಸಣೆ, ಉಚಿತ ಸಲಹೆ ಮತ್ತು ಚಿಕಿತ್ಸೆ ನೀಡಲಾಯಿತು. 10 ಜನ ಮಧುಮೇಹಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಳ್ಳಲಾಯಿತು.


**PAPER NAME : VIJAY KARNATAKA DATE : 14/11/2024**

BLDE (DEEMED TO BE UNIVERSITY)

[

SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA

**Department of Central Library**



## ಮೂಲವ್ಯಾಧಿ ತಪಾಸಣೆ ಶಿಬಿರ

ವಿಜಯಪುರ: ವಿಶ್ವ ಮೂಲವ್ಯಾಧಿ ದಿನ ಅಂಗವಾಗಿ ನಗರದ ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯ ಬಿ.ಎಂ. ಪಾಟೀಲ ವೈದ್ಯಕೀಯ ಕಾಲೇಜಿನ ಶಸ್ತ್ರಚಿಕಿತ್ಸೆ ವಿಭಾಗ, ಅಲ್ ಅಮೀನ್ ವೈದ್ಯಕೀಯ ಮಹಾವಿದ್ಯಾಲಯ, ಜಿಲ್ಲಾಸ್ಪತ್ರೆ, ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘ ಹಾಗೂ ಭಾರತೀಯ ದೊಡ್ಡ ಕರುಳು ಮತ್ತು ಗುದದ್ವಾರ ಶಸ್ತ್ರ ಚಿಕಿತ್ಸಕರ ಸಂಘದ ಸಹಯೋಗದಲ್ಲಿ ಹಲವಾರು ಕಾರ್ಯಕ್ರಮ ಆಯೋಜಿಸಲಾಗಿದೆ.

ನ.19 ರಂದು ಬೆಳಿಗ್ಗೆ 6 ರಿಂದ 7ರ ವರೆಗೆ ಬಿ.ಎಲ್.ಡಿ.ಇ. ಆಸ್ಪತ್ರೆಯಿಂದ ಗೋಳಗುಮ್ಮಟದವರೆಗೆ ಸೈಕ್ಲೋಥಾನ್, ಬೆಳಿಗ್ಗೆ 7 ರಿಂದ 8ರ ವರೆಗೆ ಗೋಳಗುಮ್ಮಟದ ಆವರಣದಲ್ಲಿ ಮೂಲವ್ಯಾಧಿ ರೋಗದ ಕುರಿತು ಜನಜಾಗೃತಿ ಶಿಬಿರ. ಮಧ್ಯಾಹ್ನ 3 ರಿಂದ 4ರ ವರೆಗೆ ಶಸ್ತ್ರಚಿಕಿತ್ಸೆ ವಿಭಾಗದ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಲಾಗಿದೆ. ಸಂಜೆ 4 ರಿಂದ 5ರ ವರೆಗೆ ನಿಧಾನಗತಿಯ ಸೈಕಲ್ ರೇಸ್ ಸ್ಪರ್ಧೆ ಆಯೋಜಿಸಲಾಗಿದೆ.

**DATE : 14/11/2024**

# BLDE (DEEMED TO BE UNIVERSITY)

[

**SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA**

**Department of Central Library**

## ಬಿಎಲ್ಡಿಇ ವಿವಿಯಲ್ಲಿ ಭಕ್ತ ಕನಕದಾಸ ಜಯಂತಿ

ವಿಜಯಪುರ: ನಗರದ ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ನಾಡಿನ ಶ್ರೇಷ್ಠ ಸಂತ ಶ್ರೀಭಕ್ತ ಕನಕದಾಸ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಿ.ಎಲ್.ಡಿ.ಇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಆರ್. ಎಂ. ಹೊನ್ನುಟಗಿ, ಡಿನ್ ರಾದ ಡಾ. ಆನಂದ ಅಂಬಲಿ, ಡಾ. ಎಸ್. ವಿ. ಪಾಟೀಲ, ಉಪಪ್ರಾಚಾರ್ಯ ಡಾ. ಎಂ. ಬಿ. ಪಾಟೀಲ, ಡೈರೆಕ್ಟರ್ ಆರ್ ಅ್ಯಂಡ್ ಡಿ ಸೆಲ್ ಡಾ. ಎಂ. ಎಂ. ಪಾಟೀಲ, ರಿಜಿಸ್ಟ್ರಾರ ಡಾ. ಆರ್. ವಿ. ಕುಲಕರ್ಣಿ, ಡೆಪ್ಯುಟಿ ರಜಿಸ್ಟ್ರಾರ ಸತೀಶ ಪಾಟೀಲ, ಸಹಾಯಕ ರಿಜಿಸ್ಟ್ರಾರ ಡಾ. ಶ್ರೀಧರ ಬಗಲಿ, ಅವರು ಶ್ರೀಭಕ್ತ ಕನಕದಾಸ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ವಿವಿಯ ಆನಂದ ಪಾಟೀಲ, ಈರಯ್ಯ, ಮಠಪತಿ, ಮಹೇಶ ಶಿವಣಗಿ, ಪವನ ಹಡಪದ, ನಾಗೇಶ ತಳವಾರ ಮುಂತಾದವರು ಉಪಸ್ಥಿತರಿದ್ದರು.

**PAPER NAME : VISHWA VANI  DATE :19/11/2024**

# BLDE (DEEMED TO BE UNIVERSITY)

[

**SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA**

**Department of Central Library**



## ಬಿಎಲ್‌ಡಿಇ ಡೀಮ್ಡ್ ವಿವಿಯಲ್ಲಿ ಕನಕದಾಸರ ಜಯಂತಿ

**ವಿಜಯಪುರ:** ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಶ್ರೇಷ್ಠ ಸಂತ ಭಕ್ತ ಕನಕದಾಸ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಆರ್.ಎಂ.ಹೊನ್ನುಟಗಿ, ಡಿನ್ ಡಾ.ಆನಂದ ಅಂಬಲಿ, ಡಾ.ಎಸ್.ವಿ.ಪಾಟೀಲ, ಉಪಪ್ರಾಚಾರ್ಯ ಡಾ.ಎಂ.ಬಿ.ಪಾಟೀಲ, ಡೈರೆಕ್ಟರ್‌ಆರ್ ಆ್ಯಂಡ್ ಡಿ ಸೆಲ್ ಡಾ.ಎಂ.ಎಂ.ಪಾಟೀಲ, ರಜಿಸ್ಟ್ರಾರ ಡಾ.ಆರ್.ವಿ.ಕುಲಕರ್ಣಿ, ಡೆಪ್ಯೂಟಿ ರಜಿಸ್ಟ್ರಾರ್ ಸತೀಶ ಪಾಟೀಲ, ಸಹಾಯಕ ರಜಿಸ್ಟ್ರಾರ್ ಡಾ.ಶ್ರೀಧರ ಬಗಲಿ ಅವರು ಶ್ರೀ ಭಕ್ತ ಕನಕದಾಸ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ವಿವಿಯ ಆನಂದ ಪಾಟೀಲ, ಈರಯ್ಯ ಮಠಪತಿ, ಮಹೇಶ ಶಿವಣಗಿ, ಪವನ ಹಡಪದ, ನಾಗೇಶ ತಳವಾರ ಇದ್ದರು.

**PAPER NAME : KANNADA PRABHA Date : 20/11/2024**



ವಿಜಯಪುರ ನಗರದ ಬಿ.ಎಲ್‌.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯಲ್ಲಿ ಸೋಮವಾರ ಕನಕದಾಸ ಜಯಂತಿ ಆಚರಿಸಲಾಯಿತು. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಆರ್‌.ಎಂ. ಹೊನ್ನುಟಗಿ, ಕಾಲೇಜಿನ ಉಪಪ್ರಾಚಾರ್ಯ ಡಾ. ಎಂ.ಬಿ. ಪಾಟೀಲ, ರಜಿಸ್ಟ್ರಾರ್ ಡಾ. ಆರ್‌.ವಿ. ಕುಲಕರ್ಣಿ ಭಾಗವಹಿಸಿದ್ದರು

**PAPER NAME : PRAJA VANI DATE : 20/11/2024**

# BLDE (DEEMED TO BE UNIVERSITY)

[

**SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA**

**Department of Central Library**



ವಿಜಯಪುರದ ಬಿಎಲ್‌ಡಿಇ ಡೀಮ್ಡ್ ವಿವಿಯಲ್ಲಿ ಕನಕದಾಸ ಜಯಂತಿ ಆಚರಿಸಲಾಯಿತು. ಬಿಎಲ್‌ಡಿಇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಆರ್.ಎಂ.ಹೊನ್ನುಟಗಿ, ಡೀನ್ ಡಾ.ಆನಂದ ಅಂಬಲಿ, ಡಾ.ಎಸ್.ವಿ.ಪಾಟೀಲ, ಉಪಪ್ರಾಚಾರ್ಯ ಡಾ.ಎಂ.ಬಿ.ಪಾಟೀಲ, ಡಾ.ಎಂ.ಎಂ.ಪಾಟೀಲ, ಡಾ.ಆರ್.ವಿ.ಕುಲಕರ್ಣಿ, ಸತೀಶ ಪಾಟೀಲ, ಡಾ.ಶ್ರೀಧರ ಬಗಲಿ, ವಿವಿಯ ಆನಂದ ಪಾಟೀಲ, ಈರಯ್ಯ ಮಠಪತಿ, ಮಹೇಶ ಶಿವಣಗಿ, ಪವನ ಹಡಪದ, ನಾಗೇಶ ತಳವಾರ ಇತರರಿದ್ದರು.

**PAPER NAME : VIJAY KARNATAKA DATE : 20/11/2024**

# BLDE (DEEMED TO BE UNIVERSITY)

[

**SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA**

**Department of Central Library**

ವಿಜಯಪುರದ ಬಿಎಲ್‌ಡಿಇ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ

# ‘ಕಾಕ್ಲಿಯರ್ ಇಂಪ್ಲಾಂಟ್’ ಸೌಲಭ್ಯಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

**ವಿಜಯಪುರ:** ಬಿಎಲ್‌ಡಿಇ ವಿಶ್ವವಿದ್ಯಾಲಯದ ಶ್ರೀ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದ ಇಎನ್‌ಟಿ ವಿಭಾಗದಲ್ಲಿ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸಾ ಸೌಲಭ್ಯವನ್ನು ಆರಂಭಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಉಪ ಕುಲಪತಿ ಡಾ.ಆರ್.ಎಸ್. ಮುಧೋಳ ತಿಳಿಸಿದರು.

ಆಸ್ಪತ್ರೆಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಉತ್ತರ ಕರ್ನಾಟಕದಲ್ಲಿ ಬೆಳಗಾವಿ ಹೊರತು ಸದ್ಯ ವಿಜಯಪುರದಲ್ಲಿ ಮಾತ್ರ ಕಾಕ್ಲಿಯರ್ ಇಂಪ್ಲಾಟ್ ಶಸ್ತ್ರ ಚಿಕಿತ್ಸಾ ಸೌಲಭ್ಯ ಲಭ್ಯವಿದ್ದು, ಇದರಿಂದ ಈ ಭಾಗದ ಜನರಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಹೇಳಿದರು.

**ಬಿಪಿಎಲ್‌ಗೆ ಉಚಿತ:** ಸುಮಾರು ₹15 ಲಕ್ಷಕ್ಕಿಂತ ಹೆಚ್ಚು ವೆಚ್ಚವಾಗುವ ಈ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್(ಎಸ್.ಎ.ಎಸ್.ಟಿ) ಯೋಜನೆಯಡಿ ಬಿಪಿಎಲ್ ಕುಟುಂಬದ 8 ತಿಂಗಳಿಂದ 6 ವರ್ಷದ ನಡುವಿನ ಮಕ್ಕಳಿಗೆ ಮಾತ್ರ ಉಚಿತವಾಗಿ ಮಾಡಲಾಗುವುದು ಎಂದು ತಿಳಿಸಿದರು.

ಹುಟ್ಟಿನಿಂದಲೇ ಗಾಡವಾದ ಕಿವುಡುತನವನ್ನು ಹೊಂದಿರುವ ಮಕ್ಕಳಿಗೆ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುತ್ತದೆ. ಇದರಿಂದ ಕಿವುಡ ಮಕ್ಕಳು ಸಾಮಾನ್ಯ ಮಕ್ಕಳಂತಾಗುತ್ತಾರೆ ಎಂದರು.

ಈ ರೀತಿಯ ಶಸ್ತ್ರ ಚಿಕಿತ್ಸೆಗೆ 8 ತಿಂಗಳಿಂದ 1 ವರ್ಷದ ವರೆಗೆ ಮಕ್ಕಳ ಶ್ರವಣೇಂದ್ರಿಯ, ಮೌಖಿಕ ಚಿಕಿತ್ಸೆಯ ಅಗತ್ಯ ಇರುತ್ತದೆ. ಶ್ರವಣ ಮತ್ತು ಮಾತನಾಡುವ ವಿಧಾನವನ್ನು ಕಲಿಸಲು ಶ್ರವಣಶಾಸ್ತ್ರಜ್ಞರೊಂದಿಗೆ ನಿರಂತರ ಸೆಷನ್‌ಗಳನ್ನು ಮಾಡಲಾಗುತ್ತದೆ.




ವಿಜಯಪುರ ಬಿಎಲ್‌ಡಿಇ ವಿಶ್ವವಿದ್ಯಾಲಯದ ಶ್ರೀ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದ ಇಎನ್‌ಟಿ ವಿಭಾಗದಲ್ಲಿ ಆರಂಭವಾಗಿರುವ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸಾ ಸೌಲಭ್ಯ ಕುರಿತು ವಿಶ್ವವಿದ್ಯಾಲಯದ ಉಪ ಕುಲಪತಿ ಡಾ.ಆರ್‌.ಎಸ್‌. ಮುಧೋಳ ಮಾಹಿತಿ ನೀಡಿದರು. ಡಾ.ಅರವಿಂದ ಪಾಟೀಲ, ಡಾ.ಲತಾ ದೇವಿ, ಡಾ.ರವೀಂದ್ರ ಕರಡಿ, ಡಾ.ರಾಜೇಶ ಹೊನ್ನುಟಗಿ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

**ಮುಖ್ಯಾಂಶಗಳು**

- ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆಗೆ ₹15 ಲಕ್ಷ ವೆಚ್ಚ
- ಬಿಪಿಎಲ್ ಫಲಾನುಭವಿಗಳಿಗೆ ಉಚಿತ ಶಸ್ತ್ರಚಿಕಿತ್ಸೆ
- ಎಲ್ಲ ವಯೋಮಾನದವರಿಗೂ ಶಸ್ತ್ರ ಚಿಕಿತ್ಸೆ ಸೌಲಭ್ಯ

ಶ್ರವಣೇಂದ್ರಿಯ ಮೌಖಿಕ ಚಿಕಿತ್ಸೆಯ ಅವಧಿಯಲ್ಲಿ ರೋಗಿಗಳಿಗೆ ಪ್ರಯಾಣದ ಶುಲ್ಕವನ್ನು ಸರ್ಕಾರವೇ ಉಚಿತವಾಗಿ ಭರಿಸಲಿದೆ ಎಂದು ಹೇಳಿದರು.

**ಇತರರಿಗೂ ಲಭ್ಯ:** ಕಾಕ್ಲೆಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆಯನ್ನು ಕಿವಿ ಕೇಳಿಸಿದ ಎಲ್ಲ ವಯಸ್ಸಿನವರಿಗೂ ಮಾಡಬಹುದಾಗಿದೆ. ಇದಕ್ಕೆ ಸುಮಾರು ₹15 ಲಕ್ಷ ವೆಚ್ಚವಾಗುತ್ತದೆ ಎಂದು ತಿಳಿಸಿದರು.

ಶ್ರೀ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದ ಪ್ರಾಂಶುಪಾಲ ಡಾ.ಅರವಿಂದ ಪಾಟೀಲ, ಡಾ.ಲತಾ ದೇವಿ, ಡಾ.ರವೀಂದ್ರ ಕರಡಿ, ಪ್ರಧಾನ ವೈದ್ಯಕೀಯ ಅಧೀಕ್ಷಕ ಡಾ.ರಾಜೇಶ ಹೊನ್ನುಟಗಿ ಇದ್ದರು.

**PAPER NAME : PRAJA VANI DATE : 21/11/2024**



ವಿಶ್ವ ಮೂಲವ್ಯಾಧಿ ದಿನಾಚರಣೆ ಅಂಗವಾಗಿ ವಿಜಯಪುರ ನಗರದ ಗೋಳಗುಮ್ಮಟ ಆವರಣದಲ್ಲಿ ವಿಜಯಪುರ ಜಿಲ್ಲಾ ಶಸ್ತ್ರ ಚಿಕಿತ್ಸಾ ತಜ್ಞವೈದ್ಯರ ತಂಡ ಮೂಲವ್ಯಾಧಿ ರೋಗದ ಜನಜಾಗೃತಿ ಕಾರ್ಯಕ್ರಮ ನಡೆಸಿತು. ಬಿ.ಎಲ್‌ಡಿ.ಇ ಆಸ್ಪತ್ರೆಯ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ ಕೋಟೆಣ್ಣವರ, ಡಾ. ಜಸ್ವಾಲಸಿಂಗ ತೆಹಲಿಯಾ, ಡಾ. ಜಿಲಾನಿ ಆವಟಿ ಭಾಗವಹಿಸಿದ್ದರು

## 'ನಕಲಿ ವೈದ್ಯರಿಂದ ಮೋಸ ಹೋಗದಿರಿ'

ವಿಜಯಪುರ: ನಕಲಿ ವೈದ್ಯರಿಂದ ಯಾರೂ ಮೋಸ ಹೋಗಬಾರದು ಎಂದು ಬಿ.ಎಲ್‌.ಡಿ.ಇ ವಿವಿಯ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ.ಮಂಜುನಾಥ ಕೋಟೆಣ್ಣವರ ಹೇಳಿದರು.

ವಿಶ್ವ ಮೂಲವ್ಯಾದಿ ದಿನಾಚರಣೆ ಅಂಗವಾಗಿ ಮಂಗಳವಾರ ನಗರದ ಗೋಳಗುಮ್ಮಟದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕರ ಸಂಘ (ಕೆಸಿಎಸ್‌-ಎಎಸ್‌ಐ) ಹಾಗೂ ಭಾರತೀಯ ದೊಡ್ಡ ಕರುಳು ಮತ್ತು ಗುದದ್ವಾರ ಶಸ್ತ್ರಚಿಕಿತ್ಸಕರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಜನಜಾಗೃತಿ ಜಾಥಾದಲ್ಲಿ ಅವರು ಮಾತನಾಡಿದರು.

ಮೂಲವ್ಯಾಧಿ ಸಾಮಾನ್ಯ ರೋಗವಾಗಿದ್ದು ಶೇ.30ರಷ್ಟು ಜನರು ಇದರಿಂದ ಬಳಲುತ್ತಿದ್ದಾರೆ. ಆಹಾರದಲ್ಲಿ ನಾರಿನಂಶ ಮತ್ತು ನೀರಿನಂಶ ಕಡಿಮೆ ಇರುವ ಆಹಾರ ಸೇವನೆ, ಪಾಶ್ಚಾತ್ಯ ಶೈಲಿಯ ಮಾಂಸಾಹಾರಿ ಆಹಾರ ಪದ್ಧತಿಯಿಂದಾಗಿ ಈ ರೋಗ ಉಂಟಾಗುತ್ತದೆ. ಮಲಬದ್ಧತೆಯೂ ಇದಕ್ಕೆ ಮೂಲ ಕಾರಣವಾಗಿದೆ. ಮೂಲವ್ಯಾಧಿ ಸಂಶಯವಿದ್ದರೆ ಯಾವುದೇ ಭಯ, ಸಂಕೋಚವಿಲ್ಲದೆ ನುರಿತ ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆಯಬೇಕು. ನಕಲಿ ವೈದ್ಯರಿಂದ ಯಾರೂ ಮೋಸ ಹೋಗಬಾರದು ಎಂದು ಹೇಳಿದರು.

ಭಾರತೀಯ ದೊಡ್ಡ ಕರುಳು ಮತ್ತು ಗುದದ್ವಾರ ಶಸ್ತ್ರಚಿಕಿತ್ಸಕರ ಸಂಘದ ಕಾರ್ಯಕಾರಿಣಿ ಸಮಿತಿ ಸದಸ್ಯ ಡಾ. ಜಸ್ಪಾಲಸಿಂಗ ತೆಹಲಿಯಾ ಮಾತನಾಡಿ, ಮೂಲವ್ಯಾಧಿ ರೋಗದ ಗುಣಲಕ್ಷಣಗಳು, ಅದನ್ನು ಕಂಡು ಹಿಡಿಯುವ ಬಗೆ ಹಾಗೂ ಅದಕ್ಕೆ ಲಭ್ಯವಿರುವ ನಾನಾ ಚಿಕಿತ್ಸೆಗಳನ್ನು ವಿವರಿಸಿದರು.

ಅಲ್ ಅಮೀನ್ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಜಿಲಾನಿ ಅವಟಿ ಮಾತನಾಡಿ, ಮೂಲವ್ಯಾಧಿ ರೋಗದ ಗುಣಲಕ್ಷಣಗಳು ಕಂಡುಬಂದರೆ ನಿರ್ಲಕ್ಷಿಸದೆ ತಜ್ಞ ವೈದ್ಯರನ್ನು ಕಾಣಬೇಕು. ಅದು ಗುದದ್ವಾರದ ಕ್ಯಾನ್ಸರ್ ಸಹಿತ ಇರುವ ಸಾಧ್ಯತೆಯಿದೆ ಎಂದರು.

ಜಿಲ್ಲಾಸ್ಪತ್ರೆಯ ಹಿರಿಯ ಶಸ್ತ್ರಚಿಕಿತ್ಸಕ ಡಾ.ಅಶೋಕ ಜಾಧವ, ಪ್ರಾಧ್ಯಾಪಕ ಡಾ.ನಿಶಿಕಾಂತ ಗುಜರ ಮಾತನಾಡಿದರು. ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಉಪಪ್ರಾಚಾರ್ಯ ಡಾ. ಎಂ.ಬಿ. ಪಾಟೀಲ, ಡಾ. ರಮಾಕಾಂತ ಬಳೂರಕರ, ಡಾ. ಬಾಬು ಕಟ್ಟಿಮನಿ, ಡಾ. ದಯಾನಂದ ಬಿರಾದಾರ, ಡಾ. ಮಂಜುನಾಥ ಸಾವಂತ ಇದ್ದರು.

**PAPER NAME : PRAJA VANI DATE : 21/11/2024**

SK - 21/11/24

# ಕಿವುಡುತನ: ಉಚಿತ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ




ವಿಜಯಪುರದ ಬಿಎಲ್‌ಡಿಇ ವೈದ್ಯಕೀಯ ಮಹಾವಿದ್ಯಾಲಯದ ಸುದಿಗೋಷ್ಠಿಯಲ್ಲಿ ಪ್ರೋ.ಲತಾದೇವಿ ಮಾತನಾಡಿದರು.

**ವಿಜಯಪುರ:** ಹುಟ್ಟಿನಿಂದಲೇ ಕಿವುಡುತನ ಅಥವಾ ಮೆನಿಂಜೈಟಿಸ್‌ನಿಂದ ಕಿವುಡುತನ ಹೊಂದಿರುವ ಮಕ್ಕಳಿಗೆ ಬಿಎಲ್‌ಡಿಇ ವೈದ್ಯಕೀಯ ಸಂಶೋಧನಾ ಕೇಂದ್ರದಲ್ಲಿ ಉಚಿತ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಮಾಡಲಾಗುವುದು ಎಂದು ಬಿಎಲ್‌ಡಿಇ ಮಹಾವಿದ್ಯಾಲಯದ ಪ್ರೋ.ಲತಾದೇವಿ ಹೇಳಿದರು.

ನಗರದ ಬಿಎಲ್‌ಡಿಇ ಆಸ್ಪತ್ರೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ 8 ತಿಂಗಳಿಂದ 6 ವರ್ಷದ ಕಿವಿಕೇಳದ ಮಕ್ಕಳಿಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆಯಡಿ ಉಚಿತ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ. ಈ ಚಿಕಿತ್ಸೆ ಉತ್ತರ ಕರ್ನಾಟಕದ ಬೆಳಗಾವಿ ಬಿಟ್ಟರೆ, ವಿಜಯಪುರದಲ್ಲಿ ಮಾತ್ರ ಲಭ್ಯವಿದೆ. ಈ ರೀತಿಯ ಶಸ್ತ್ರಚಿಕಿತ್ಸೆಗೆ ಎಂಟು ತಿಂಗಳಿಂದ ಒಂದು ವರ್ಷದ ವರೆಗೂ ಶ್ರವಣೇಂದ್ರಿಯ, ಮೌಖಿಕ ಚಿಕಿತ್ಸೆಯ ಅಗತ್ಯವಿರುತ್ತದೆ. ಹಾಗಾಗಿ ಶ್ರವಣ ಮತ್ತು ಮಾತನಾಡುವ ವಿಧಾನವನ್ನು ಕಲಿಯಲು ಶ್ರವಣ ಶಾಸ್ತ್ರಜ್ಞರೊಂದಿಗೆ ನಿರಂತರ ಸೆಷನ್ ಮಾಡಲಾಗುತ್ತದೆ. ಶ್ರವಣೇಂದ್ರಿಯ ಮೌಖಿಕ ಚಿಕಿತ್ಸೆಯ ಅವಧಿಯಲ್ಲಿ ರೋಗಿಗಳ ಪ್ರಯಾಣದ ಶುಲ್ಕವನ್ನು ಸಹಿತ ನೀಡಲಾಗುತ್ತದೆ ಎಂದು ವಿವರಿಸಿದರು.

ಈ ಚಿಕಿತ್ಸೆ ಮಾಡುವುದಕ್ಕಿಂತ ಮೊದಲು ಅಗತ್ಯ ತಪಾಸಣೆಗಳನ್ನು ಮಾಡಲಾಗುತ್ತದೆ. ಅದರಲ್ಲಿ ಎಂಆರ್‌ಐ, ಎಚ್‌ಆರ್‌ಸಿಟಿ ವಿವಿಧ ಸ್ಕ್ಯಾನಿಂಗ್‌ಗಳನ್ನು ಮಾಡಲಾಗುತ್ತದೆ. ಶಸ್ತ್ರಚಿಕಿತ್ಸೆ ಮಾಡುವುದಕ್ಕಿಂತ ಒಂದು ತಿಂಗಳು ಮೊದಲೇ ಎಲ್ಲ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ನಂತರ ಮಗು ಚಿಕಿತ್ಸೆಗೆ ಅರ್ಹವಾಗಿದೆಯೇ? ಎನ್ನುವುದನ್ನು ತಿಳಿದುಕೊಂಡು ವೈದ್ಯರ ಪ್ರೋಟೋಕಾಲ್ ಪ್ರಕಾರ ಸುವರ್ಣ ಆರೋಗ್ಯ ಟ್ರಸ್ಟ್‌ಗೆ ಎಲ್ಲ ದಾಖಲರಗಳನ್ನು ಸಲ್ಲಿಸಿ, ಅನುಮೋದನೆ ಪಡೆದುಕೊಂಡು ಇಂಪ್ಲಾಂಟ್‌ನ್ನು ಸರ್ಕಾರದಿಂದ ತರಿಸಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ.

10 ದಿನಗಳ ನಂತರ ಸ್ವಿಚ್ ಆನ್ ಮಾಡಲಾಗುತ್ತದೆ. ನಂತರ ಮಗುವಿನೊಂದಿಗೆ ನಿರಂತರ ಸಮಾಲೋಚನೆ ನಡೆಸಿ ಕನಿಷ್ಠ ಒಂದು ವರ್ಷದವರೆಗೂ ಮೌಖಿಕ ಚಿಕಿತ್ಸೆ ಹಾಗೂ ಸಮಾಲೋಚನೆ ನಡೆಸಿ ಮಗುವನ್ನು ಸಂಪೂರ್ಣ ಸಾಮಾನ್ಯರಂತೆ ಕೇಳಿಸಿಕೊಳ್ಳುವುದು ಹಾಗೂ ಮಾತನಾಡಲು ಪ್ರಾರಂಭಿಸುವಂತೆ ಮಾಡಲಾಗುತ್ತದೆ ಎಂದು ಹೇಳಿದರು. ಬಿಎಲ್‌ಡಿಇ ಮಹಾವಿದ್ಯಾಲಯದ ಉಪಕುಲಪತಿ ಡಾ.ಆರ್.ಎಸ್.ಪಾಟೀಲ, ರಿಜಿಸ್ಟ್ರಾರ್ ಡಾ.ಆರ್.ವಿ.ಕುಲಕರ್ಣಿ, ಪ್ರಾಚಾರ್ಯ ಅರವಿಂದ ಪಾಟೀಲ, ಪ್ರಧಾನ ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹಿನ್ನುಟಗಿ ಇಎನ್‌ಟಿ ವಿಭಾಗದ ಸಿಬ್ಬಂದಿ ಉಪಸ್ಥಿತರಿದ್ದರು.

**PAPER NAME : SAMYUKTA KARNATA DATE : 21/11/2024**

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆಯಡಿ ಉಚಿತ ಸೇವೆ | ಬಿಪಿಎಲ್ ಕುಟುಂಬದ ಚಿಕ್ಕ ಮಕ್ಕಳಿಗೆ ಅನುಕೂಲ

# ಬಿಎಲ್‌ಡಿಇ ಆಸ್ಪತ್ರೆಯಲ್ಲಿ ಕಾಕ್ಲಿಯರ್ ಇಂಪ್ಲಾಂಟ್ ಸರ್ಜರಿ ಲಭ್ಯ

■ ಉದಯವಾಣಿ ಸಮಾಚಾರ

**ವಿಜಯಪುರ:** ನಗರದ ಪ್ರತಿಷ್ಠಿತ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ರಾಜ್ಯ ಸರ್ಕಾರದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಯೋಜನೆಯಡಿ ಶ್ರವಣ ದೋಷ (ಕಿವುಡುತನ) ಹೊಂದಿದ ಮಕ್ಕಳಿಗೆ ಉಚಿತವಾಗಿ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಯ ಸೇವೆಯನ್ನು ನೀಡಲಾಗುತ್ತದೆ ಎಂದು ವಿವಿಯ ಉಪಕುಲಪತಿ ಡಾ|ಆರ್.ಎಸ್.ಮುಧೋಳ ತಿಳಿಸಿದರು.

ಬಿಎಲ್‌ಡಿಇ ಆಸ್ಪತ್ರೆಯ ಟ್ರಾಮಾ ಸೆಂಟರ್ ಆಡಿಟೋರಿಯಂನಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಕ್ತ ಸಂಬಂಧದ ಮದುವೆಗಳಿಂದಾಗಿ ಹುಟ್ಟುವ ಮಕ್ಕಳಲ್ಲಿ ಶ್ರವಣ ದೋಷ ಸೇರಿ ಇತರ ಸಮಸ್ಯೆ ಉಂಟಾಗುತ್ತವೆ. ಕಿವುಡುತನದ ಮಗು ಇದ್ದರೆ, ಇಡಿ ಕುಟುಂಬ ಪರಿತಪಿಸಬೇಕಾಗುತ್ತದೆ. ಆದರೆ, ಮಗುವಿನ ಎರಡು ವರ್ಷ ವಯಸ್ಸಿನೊಳಗೆ ಇಂತಹ ಸಮಸ್ಯೆ ಕಂಡುಕೊಂಡು ಚಿಕಿತ್ಸೆ ಕೊಡಿಸಿದರೆ, ಮಗು ಎಲ್ಲರಂತೆ ಜೀವಿಸಲು ಸಾಧ್ಯ. ಇದಕ್ಕೆ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಯು ಪ್ರಮುಖ ಪರಿಹಾರವಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಬೆಳಗಾವಿ ನಂತರ ವಿಜಯಪುರದಲ್ಲಿ ಈ ಶಸ್ತ್ರಚಿಕಿತ್ಸೆ ಲಭ್ಯವಾಗುತ್ತಿದೆ. ಈ ಭಾಗದ ಜನರಿಗೆ ಅಪರೂಪದ ಅವಕಾಶವಾಗಿದೆ ಎಂದು ಹೇಳಿದರು.




**ವಿಜಯಪುರ: ಬಿಎಲ್‌ಡಿಇ ಆಸ್ಪತ್ರೆಯ ಟ್ರಾಮಾ ಸೆಂಟರ್ ಆಡಿಟೋರಿಯಂನಲ್ಲಿ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಬಗ್ಗೆ ಡಾ|ಆರ್.ಎಸ್.ಮುಧೋಳ, ಡಾ|ಆರ್.ವಿ.ಕುಲಕರ್ಣಿ ಹಾಗೂ ಇತರ ತಜ್ಞರು ವಿವರಿಸಿದರು.**

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆಯಡಿ ಹುಟ್ಟಿನಿಂದಲೇ ಆಳವಾದ ಶ್ರವಣ ದೋಷ ಹೊಂದಿರುವ ಅಥವಾ ಮೆನಿಂಜೈಟಿಸ್‌ನಿಂದಾಗಿ ಕಿವುಡುತನವನ್ನು ಹೊಂದಿದ ಮಕಳಿಗೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. 8 ತಿಂಗಳಿಂದ 6 ವರ್ಷಗಳ ನಡುವಿನ ವಯಸ್ಸಿನ ಮಕ್ಕಳಿಗೆ ಮಾತ್ರ ಈ ಯೋಜನೆ ಅನ್ವಯವಾಗುತ್ತದೆ. ಜತೆಗೆ ಬಡತನ ರೇಖೆಗಿಂತ ಕೆಳಗಿನ ಬಿಪಿಎಲ್ ಕಾರ್ಡ್‌ದಾರರು ಈ ಲಾಭ ಪಡೆಯಬಹುದು. ಈಗಾಗಲೇ ಆಸ್ಪತ್ರೆಯಲ್ಲಿ ಇಂತಹ ಇಬ್ಬರು ಮಕ್ಕಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮುಂದಿನ ತಿಂಗಳಲ್ಲಿ ಈ ಯೋಜನೆಯಡಿ ಮೊದಲ ಶಸ್ತ್ರಚಿಕಿತ್ಸೆ ಮಾಡಲು ಉದ್ದೇಶಿಸಲಾಗಿದೆ ಎಂದರು.

ಇದೇ ಶಸ್ತ್ರಚಿಕಿತ್ಸೆಯನ್ನು ಖಾಸಗಿಯಾಗಿ ನಡೆಸಿದರೆ ಸುಮಾರು 15 ಲಕ್ಷ ರೂ. ವೆಚ್ಚವಾಗುತ್ತದೆ. ಸರ್ಕಾರದ ಈ ಯೋಜನೆಯಡಿ 6 ಲಕ್ಷ ರೂ.ಗಿಂತಲೂ ಅಕ ಆಗುತ್ತದೆ. ಈ ಸಂಪೂರ್ಣ ವೆಚ್ಚವನ್ನು ಸರ್ಕಾರವೇ ಭರಿಸುತ್ತದೆ. ಶಸ್ತ್ರಚಿಕಿತ್ಸೆಗಿಂತ ಕನಿಷ್ಠ ಒಂದು ತಿಂಗಳ ಮೊದಲು ಅಗತ್ಯವಿರುವ ಎಲ್ಲ ಸಾಮಾನ್ಯ ತಪಾಸಣೆಯನ್ನು ಮಾಡಲಾಗುತ್ತದೆ. ಜತೆಗೆ ಎಲ್ಲ ದಾಖಲೆಗಳು ಕ್ರಮಬದ್ಧವಾಗಿದ್ದರೆ, ಸರ್ಕಾರಿ ಯೋಜನೆಯಡಿ ಅನುಮೋದನೆ ಪಡೆಯಲಾಗುತ್ತದೆ. ಅಲ್ಲದೇ, ಕಾಕ್ಲಿಯರ್ ಇಂಪ್ಲಾಂಟ್ (ಕಿವಿಯ ಯಂತ್ರ) ಸರ್ಕಾರದಿಂದಲೇ ತರಿಸಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ ಎಂದು ವಿವರಿಸಿದರು.

ಶಸ್ತ್ರಚಿಕಿತ್ಸೆಯ 10 ದಿನಗಳ ನಂತರ ಕಿವಿಯ ಯಂತ್ರವನ್ನು ಸ್ವಿಚ್ ಆನ್ ಮಾಡಲಾಗುತ್ತದೆ. ನಂತರ ಮಗುವನ್ನು ಆಡಿಟರಿ ಮೌಖಿಕ ಚಿಕಿತ್ಸೆವನ್ನು ಒಳಪಡಿಸಲಾಗುತ್ತದೆ. ಮಗುವಿಗೆ ಮಾತನ್ನು ಕೇಳಲು, ಗ್ರಹಿಸಲು ಮತ್ತು ಅರ್ಥಮಾಡಿಕೊಳ್ಳಲು ಸಾಧ್ಯವಾಗುವವರೆಗೆ ಕನಿಷ್ಠ ಒಂದು ವರ್ಷ ವೈದ್ಯರೊಡನೆ ಸಮಾಲೋಚನೆ ಅಗತ್ಯವಾಗುತ್ತದೆ. ಇದಕ್ಕೆ ತಕ್ಕ ಎಲ್ಲ ಸೌಲಭ್ಯಗಳು ನಮ್ಮಲ್ಲಿ ಲಭ್ಯವಿದ್ದು ಇದು ಬಡ ಕುಟುಂಬಗಳಿಗೆ ಅನುಕೂಲವಾಗಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿವಿಯ ರಿಜಿಸ್ಟ್ರಾರ್ ಡಾ|ಆರ್.ವಿ.ಕುಲಕರ್ಣಿ, ಪ್ರಾಚಾರ್ಯ ಡಾ|ಅರವಿಂದ ಪಾಟೀಲ, ಪ್ರಧಾನ ವೈದ್ಯಕೀಯ ಅಧೀಕ್ಷಕ ಡಾ|ರಾಜೇಶ ಹೊನ್ನಟಗಿ, ಡಾ|ಎಚ್.ಟಿ.ಲತಾದೇವಿ ಇದ್ದರು.

Udayavani

PAPER NAME : UDAYA VANI Date : 21/11/2024

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆಯಡಿ

## ಬಿಎಲ್‌ಡಿಇ ಆಸ್ಪತ್ರೆಯಲ್ಲಿ ಕಿವುಡು ಮಕ್ಕಳಿಗೆ ಶಸ್ತ್ರಚಿಕಿತ್ಸೆ

**ವಿಕ ಸುದ್ದಿಲೋಕ** ವಿಜಯಪುರ

''ಬಿ.ಎಂ.ಪಾಟೀಲ ವೈದ್ಯಕೀಯ ಮಹಾ ವಿದ್ಯಾಲಯ ಹಾಗೂ ಆಸ್ಪತ್ರೆಯಲ್ಲಿ ರಾಜ್ಯ ಸರಕಾರದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆಯಡಿ ಕಿವುಡುತನ ಹೊಂದಿದ ಮಕ್ಕಳಿಗೆ ಉಚಿತವಾಗಿ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಸೇವೆ ಒದಗಿಸಲಾಗುತ್ತದೆ,'' ಎಂದು ಬಿಎಲ್‌ಡಿಇ ಡೀಮ್ಡ್ ವಿವಿ ಉಪಕುಲಪತಿ ಡಾ.ಆರ್.ಎಸ್. ಮುಧೋಳ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ರಕ್ತ ಸಂಬಂಧ ಮದುವೆಗಳಿಂದಾಗಿ ಹುಟ್ಟುವ ಮಕ್ಕಳಲ್ಲಿ ಕಿವುಡುತನ ಸಮಸ್ಯೆ ಉಂಟಾಗುತ್ತದೆ. ಇದಕ್ಕೆ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆ ಪರಿಹಾರವಾಗಿದೆ,'' ಎಂದರು.

''ಮಗುವಿನ 2 ವರ್ಷದೊಳಗೆ ಇಂಥ ಸಮಸ್ಯೆ ಕಂಡುಬಂದು ಚಿಕಿತ್ಸೆ ಕೊಡಿಸಿದರೆ ಮಗು ಎಲ್ಲರಂತೆ ಜೀವಿಸಲು ಸಾಧ್ಯವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಬೆಳಗಾವಿ ನಂತರ ವಿಜಯಪುರದಲ್ಲಿ ಶಸ್ತ್ರ ಚಿಕಿತ್ಸೆ ಲಭ್ಯವಾಗುತ್ತಿದೆ,'' ಎಂದರು.

''ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಯೋಜನೆಯಡಿ ಹುಟ್ಟಿನಿಂದಲೇ ಕಿವುಡುತನ ಹೊಂದಿರುವ ಅಥವಾ ಮೆನಿಂಜೈಟಿಸ್‌ನಿಂದಾಗಿ ಕಿವುಡುತನ ಹೊಂದಿದ ಮಕ್ಕಳಿಗೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. 8 ತಿಂಗಳಿಂದ 6 ವರ್ಷಗಳ ನಡುವಿನ ವಯಸ್ಸಿನ ಮಕ್ಕಳಿಗೆ ಮಾತ್ರ ಈ ಯೋಜನೆ ಅನ್ವಯವಾಗುತ್ತದೆ. ಜತೆಗೆ ಬಿಪಿಎಲ್ ಕಾರ್ಡ್ ಇದ್ದವರು ಯೋಜನೆಯ ಲಾಭ ಪಡೆಯಬಹುದು,'' ಎಂದು ವಿವರಿಸಿದರು.

''ಶಸ್ತ್ರಚಿಕಿತ್ಸೆಯನ್ನು ಖಾಸಗಿಯಾಗಿ ನಡೆಸಿದರೆ 15 ಲಕ್ಷ ರೂ.ಗಿಂತಲೂ ಹೆಚ್ಚು ವೆಚ್ಚವಾಗುತ್ತದೆ. ಯೋಜನೆಯಡಿ 6 ಲಕ್ಷ ರೂ. ಆಗುತ್ತದೆ. ವೆಚ್ಚವನ್ನು ಸರಕಾರವೇ ಭರಿಸುತ್ತದೆ,'' ಎಂದರು.

ವಿವಿಯ ರಿಜಿಸ್ಟ್ರಾರ್ ಡಾ.ಆರ್.ವಿ. ಕುಲಕರ್ಣಿ, ಪ್ರಾಚಾರ್ಯ ಡಾ. ಅರವಿಂದ ಪಾಟೀಲ, ಪ್ರಧಾನ ವೈದ್ಯಕೀಯ ಅಧೀಕ್ಷಕ ಡಾ.ರಾಜೇಶ ಹೊನ್ನಟಗಿ, ಡಾ.ಎಚ್.ಟಿ.ಲತಾದೇವಿ ಇದ್ದರು.

VK 21/11/24

PAPER NAME : VIJAYA KARNATAKA Date : 21/11/2024

VK 21/11/24

ವಿಶ್ವ ಮೂಲವ್ಯಾಧಿ ದಿನಾಚರಣೆ, ಜನಜಾಗೃತಿ ಜಾಥಾ | ಡಾ.ಮಂಜುನಾಥ ಕೋಟೆಣ್ಣವರ ಹೇಳಿಕೆ

# ನಕಲಿ ವೈದ್ಯರಿಂದ ಮೋಸ ಹೋಗಬೇಡಿ

■ ವಿಕ ಸುದ್ದಿಲೋಕ ವಿಜಯಪುರ

''ಮೂಲವ್ಯಾಧಿ ಸಾಮಾನ್ಯ ರೋಗವಾಗಿದ್ದು, ಶೇ.30ರಷ್ಟು ಜನರು ಇದರಿಂದ ಬಳಲುತ್ತಿದ್ದಾರೆ,'' ಎಂದು ಬಿಎಲ್‌ಡಿಇ ಡೀಮ್ಡ್ ವಿವಿಯ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ.ಮಂಜುನಾಥ ಕೋಟೆಣ್ಣವರ ಹೇಳಿದರು.

ನಗರದ ಐತಿಹಾಸಿಕ ಗೋಳಗುಮ್ಮಟದಲ್ಲಿ ವಿಶ್ವ ಮೂಲವ್ಯಾಧಿ ದಿನಾಚರಣೆ ನಿಮಿತ್ತ ಜಿಲ್ಲಾ ಶಸ್ತ್ರಚಿಕಿತ್ಸಕರ ಸಂಘ(ಕೆಸಿಎಸ್-ಎಎಸ್‌ಐ) ಹಾಗೂ ಭಾರತೀಯ ದೊಡ್ಡ ಕರುಳು ಮತ್ತು ಗುದದ್ವಾರ ಶಸ್ತ್ರಚಿಕಿತ್ಸಕರ ಸಂಘ (ಎಸಿಆರ್‌ಎಸ್‌ಐ) ಸಹಯೋಗದಲ್ಲಿ ಆಯೋಜಿಸಿದ್ದ ಜನಜಾಗೃತಿ ಜಾಥಾದಲ್ಲಿ ಅವರು ಮಾತನಾಡಿದರು.

''ನಾರಿನಂಶ, ನೀರಿನಂಶ ಕಡಿಮೆ ಇರುವ ಆಹಾರ ಸೇವನೆ, ಪಾಶ್ಚಾತ್ಯ ಶೈಲಿಯ, ಮಾಂಸಾಹಾರಿ ಆಹಾರ ಪದ್ಧತಿಯಿಂದ ಹಾಗೂ ಮಲಬದ್ಧತೆಯಿಂದ ಈ ರೋಗ ಉಂಟಾಗುತ್ತದೆ. ಮಲದಲ್ಲಿ ರಕ್ತ ಬೀಳುವುದು ಸಾಮಾನ್ಯ ಲಕ್ಷಣವಾಗಿದೆ. ಮೂಲವ್ಯಾಧಿ ಸಂಶಯವಿದ್ದರೆ ನುರಿತ ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆಯಬೇಕು. ನಕಲಿ ವೈದ್ಯರಿಂದ ಯಾರೂ ಮೋಸ ಹೋಗಬಾರದು,'' ಎಂದರು.

ಎಸಿಆರ್‌ಎಸ್‌ಐ ಕಾರ್ಯಕಾರಿಣಿ ಸಮಿತಿ ಸದಸ್ಯ ಡಾ.ಜಸ್ಪಾಲಸಿಂಗ ತೆಹಲಿಯಾ ಅವರು ಮೂಲವ್ಯಾಧಿ ರೋಗದ ಗುಣಲಕ್ಷಣಗಳು, ಅದನ್ನು ಕಂಡು ಹಿಡಿಯುವ ಬಗೆ ಹಾಗೂ ಅದಕ್ಕೆ ಲಭ್ಯವಿರುವ ನಾನಾ ಚಿಕಿತ್ಸೆಗಳನ್ನು ವಿವರಿಸಿದರು.

ಅಲ್‌ಅಮೀನ್ ವೈದ್ಯಕೀಯ ಕಾಲೇಜು, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಜಿಲಾನಿ ಅವಟಿ ಮಾತನಾಡಿ, ''ಬಿಎಲ್‌ಡಿಇ, ಅಲ್‌ಅಮೀನ್ ಮತ್ತು ಜಿಲ್ಲಾಸ್ಪತ್ರೆಗಳಲ್ಲಿ ಉಚಿತವಾಗಿ ತಪಾಸಣೆ, ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದ್ದು, ಜಿಲ್ಲೆಯ ಜನತೆ ಸದುಪಯೋಗ ಪಡೆಯಬೇಕು,'' ಎಂದರು.

ಜಿಲ್ಲಾಸ್ಪತ್ರೆಯ ಹಿರಿಯ ಶಸ್ತ್ರಚಿಕಿತ್ಸಕ ಡಾ.ಅಶೋಕ ಜಾಧವ, ಪ್ರಾಧ್ಯಾಪಕ ಡಾ.ನಿಶಿಕಾಂತ ಗುಜರ ಮಾತನಾಡಿದರು.

ಇದಕ್ಕೂ ಮೊದಲು ಬಿಎಲ್‌ಡಿಇ ಆಸ್ಪತ್ರೆಯಿಂದ ಗೋಳಗುಮ್ಮಟದವರೆಗೆ ಸೈಕ್ಲೋಥಾನ್ ನಡೆಯಿತು. ಮೂಲವ್ಯಾಧಿ ರೋಗದ ಬಗ್ಗೆ ಜನಜಾಗೃತಿಗೆ ಭಿತ್ತಿಚಿತ್ರಗಳನ್ನು ಪ್ರದರ್ಶಿಸಲಾಯಿತು.ಬಿ.ಎಂ.ಪಾಟೀಲ ವೈದ್ಯಕೀಯ ಕಾಲೇಜ್‌ನ ಉಪಪ್ರಾಚಾರ್ಯ ಡಾ. ಎಂ.ಬಿ.ಪಾಟೀಲ, ಜಿಲ್ಲಾ ಶಸ್ತ್ರಚಿಕಿತ್ಸಕರ ಸಂಘದ ಕಾರ್ಯದರ್ಶಿ ಡಾ.ರಮಾಕಾಂತ ಬಳೂರಕರ, ಡಾ.ಬಾಬು ಕಟ್ಟಿಮನಿ, ಡಾ.ದಯಾನಂದ ಬಿರಾದಾರ, ಡಾ.ಮಂಜುನಾಥ ಸಾವಂತ ಸೇರಿದಂತೆ 30 ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಗೃಹ ವೈದ್ಯರು ಪಾಲ್ಗೊಂಡಿದ್ದರು.



ವಿಜಯಪುರದ ಗೋಲಗುಮ್ಮಟ ಆವರಣದಲ್ಲಿ ವಿಶ್ವ ಮೂಲವ್ಯಾಧಿ ದಿನಾಚರಣೆ ನಿಮಿತ್ತ ಮೂಲವ್ಯಾಧಿ ರೋಗದ ಜನಜಾಗೃತಿ ಕಾರ್ಯಕ್ರಮ ಜರುಗಿತು.

**ರಸ ಪ್ರಶ್ನೆ ಸ್ಪರ್ಧೆ**

ನಗರದ ಬಿಎಲ್‌ಡಿಇ ಆಸ್ಪತ್ರೆಯ ವೈದ್ಯಕೀಯ ಶಿಕ್ಷಣ ಸಭಾಂಗಣದಲ್ಲಿ ಶಸ್ತ್ರಚಿಕಿತ್ಸೆ ವಿಭಾಗದ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಮೂಲವ್ಯಾಧಿ ಆಧಾರಿತ ರಸಪ್ರಶ್ನೆ ಸ್ಪರ್ಧೆಯನ್ನು ಕ್ವಿಜ್ ಮಾಸ್ಟರ್ ಡಾ.ದೀಪಕ ಚೌಹಾಣ್ ನಡೆಸಿದರು.
ಡಾ.ಶ್ರೀಯಾ, ಡಾ.ಸಾತ್ವಿಕ, ಡಾ.ನಿತೇಶ ತಂಡ ಪ್ರಥಮ, ಡಾ.ವೈಷ್ಣವಿ, ಡಾ.ವೆಂಕಟಾ, ಡಾ.ಗಝುಲ್ ತಂಡ ದ್ವಿತೀಯ ಸ್ಥಾನ ಪಡೆಯಿತು. ಬಿ.ಎಂ.ಪಾಟೀಲ ವೈದ್ಯಕೀಯ ಕಾಲೇಜ್ ಪ್ರಾಚಾರ್ಯ ಡಾ.ಅರವಿಂದ ಪಾಟೀಲ, ಡೀನ್ ಫ್ಯಾಕಲ್ಟಿ ಆಫ್ ಮೆಡಿಸಿನ್ ಡಾ.ತೇಜಸ್ವಿನಿ ವಲ್ಲಭ, ಡಾ.ವೀಣಾ ಕೋರಿಶೆಟ್ಟಿ,ಡಾ.ಅನಿಕೇತನ ಇದ್ದರು.
ನಂತರ ಬಿಎಲ್‌ಡಿಇ ಆಟದ ಮೈದಾನದಲ್ಲಿ ನಡೆದ ನಿಧಾನಗತಿಯ ಸೈಕಲ್ ಓಡಿಸುವ ಸ್ಪರ್ಧೆಯಲ್ಲಿ ವಿದ್ಯಾರ್ಥಿ ವಿಭಾಗದಲ್ಲಿ ಅಲ್‌ಅಮೀನ್ ವೈದ್ಯಕೀಯ ಕಾಲೇಜಿನ ಡಾ.ವಿಶ್ರುತ ಪ್ರಥಮ ಮತ್ತು ಬಿ.ಎಂ.ಪಾಟೀಲ ವೈದ್ಯಕೀಯ ಕಾಲೇಜಿನ ಡಾ.ವೆಂಕಟರಮಣ ದ್ವಿತೀಯ ಸ್ಥಾನ ಗಳಿಸಿದರು. ಬೋಧಕ ಸಿಬ್ಬಂದಿ ವಿಭಾಗದಲ್ಲಿ ಡಾ.ಶಿವರಾಜ ಮಂಗ್ಯಾಳ ಪ್ರಥಮ ಮತ್ತು ಡಾ.ಗಿರೀಶ ಕುಲ್ಲೊಳ್ಳಿ ದ್ವಿತೀಯ ಸ್ಥಾನ ಗಳಿಸಿದರು.

PAPER NAME : VIJAYA KARNATAKA Date : 21/11/2024

# BLDE (DEEMED TO BE UNIVERSITY)

[

SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA

**Department of Central Library**


Vishwavani 21/11/24

# ಬಿಎಲ್ಡಿಇ ಆಸ್ಪತ್ರೆಗೆ ಕಾಕ್ಲೀಯಾರ್ ಇಂಪ್ಲಾಂಟ್ ಯೋಜನೆ ಮಂಜೂರು

## ಹುಟ್ಟು ಕಿವುಡತನಕ್ಕೆ ಉಚಿತ ಕಾಕ್ಲೀಯಾರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಸೌಲಭ್ಯ : ಡಾ.ಆರ್.ಎಸ್.ಮುಧೋಳ

**ವಿಜಯಪುರ:** ಹುಟ್ಟು ಕಿವುಡುತನದಿಂದ ಬಳಲುತ್ತಿರುವ 8 ತಿಂಗಳಿಂದ 6 ವರ್ಷದೊಳಗಿನ ಮಕ್ಕಳಿಗೆ ಅತ್ಯಾಧುನಿಕ ಕಾಕ್ಲಿಯಾರ್ ಇಂಪ್ಲಾಂಟ್ ಯೋಜನೆ ಅತ್ಯಂತ ಉಪಯುಕ್ತವಾಗಿದೆ. ಬಿಎಲ್ಡಿಇ ಆಸ್ಪತ್ರೆಯಲ್ಲಿ ಸರಕಾರದ ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ವತಿಯಿಂದ ಸುವರ್ಣ ಕರ್ನಾಟಕ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್.ಎ.ಎಸ್.ಟಿ) ಯೋಜನೆಯಡಿ ಇಂತಹ ಮಕ್ಕಳಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆ ನೀಡಲು ಬಿಎಲ್ಡಿಇ ಆಸ್ಪತ್ರೆ ಸನ್ನದ್ಧವಾಗಿದೆ ಎಂದು ಬಿಎಲ್ಡಿಇ ಡೀಮ್ಡ್ ವಿವಿಯ ಉಪಕುಲಪತಿ ಡಾ.ಆರ್.ಎಸ್.ಮುಧೋಳ ಮಾಹಿತಿ ನೀಡಿದರು.

ನಗರದ ಬಿಎಲ್ಡಿಇ ಆಸ್ಪತ್ರೆಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ಈ ಕುರಿತು ವಿವರಿಸಿದರು. ಬಿಎಲ್ಡಿಇ ವಿಶ್ವವಿದ್ಯಾಲಯ ಹಾಗೂ ಬಿ.ಎಂ ಪಾಟೀಲ್ ಮೆಡಿಕಲ್ ಕಾಲೇಜಿಗೆ ರಾಜ್ಯ ಸರಕಾರದಿಂದ ಕಾಕ್ಲೀಯಾರ್ ಇಂಪ್ಲಾಂಟ್ ಯೋಜನೆ ಮಂಜೂರಾಗಿದೆ. ಉತ್ತರ ಕರ್ನಾಟಕದಲ್ಲಿ ಕೆಎಲ್ಇ ಆಸ್ಪತ್ರೆ, ನಂತರ ಬಿಎಲ್ಡಿಇ ಆಸ್ಪತ್ರೆ ಈ ಯೋಜನೆ ಮಂಜೂರಾತಿ ಪಡೆದ 2 ನೇ ಆಸ್ಪತ್ರೆಯಾಗಿದೆ. ಭಾಷೆ, ಸಂವಹನ ಸಾಮರ್ಥ್ಯ, ಮಾತು ಹಾಗೂ ಕಲಿಕೆ ಈ ಎಲ್ಲದರ ಬೆಳವಣಿಗೆ ನಿಂತಿರುವುದೇ ಶ್ರವಣಶಕ್ತಿಯಿಂದ. ಹುಟ್ಟು ಕಿವುಡುತನವಿರುವವರಿಗೆ ಹುಟ್ಟು ಮೂಕುತನವೂ ಬರುತ್ತದೆ. ಇದರಿಂದ ಮೆದುಳು ಸಹ ಬೆಳವಣಿಗೆಯಾಗುವುದಿಲ್ಲ. ಹೊರ ಜಗತ್ತಿನ ಪರಿಜ್ಞಾನಕ್ಕೆ ಶ್ರವಣ ಇಂದ್ರೀಯ ಮುಖ್ಯ. ಮಗು ಬುದ್ಧಿಮಾಂದ್ಯವೂ ಆಗಬಹುದು ಎಂದರು.

ಸುಮಾರು 15 ಲಕ್ಷಕ್ಕಿಂತ ರು. ಹೆಚ್ಚು ವೆಚ್ಚವಾಗುವ ಈ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್(ಎಸ್.ಎ.ಎಸ್.ಟಿ) ಯೋಜನೆಯಡಿ ಬಿಪಿಎಲ್ ಕುಟುಂಬದ 8 ತಿಂಗಳಿಂದ 6 ವರ್ಷದ ನಡುವಿನ ಮಕ್ಕಳಿಗೆ ಮಾತ್ರ ಉಚಿತವಾಗಿ ಮಾಡಲಾಗುವುದು. ಹುಟ್ಟಿನಿಂದಲೇ ಗಾಢವಾದ ಕಿವುಡುತನವನ್ನು ಹೊಂದಿರುವ ಮಕ್ಕಳಿಗೆ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುತ್ತದೆ. ಇದರಿಂದ ಕಿವುಡ ಮಕ್ಕಳು ಸಾಮಾನ್ಯ ಮಕ್ಕಳಂತಾಗುತ್ತಾರೆ. ಈ ಚಿಕಿತ್ಸೆಗಾಗಿ ಬಿಎಲ್ಡಿಇ ಆಸ್ಪತ್ರೆಯಲ್ಲಿ ಒಂದೂವರೇ ಕೋಟಿ ಖರ್ಚು ಮಾಡಿ ಅತ್ಯಾಧುನಿಕ ಶಸ್ತ್ರಚಿಕಿತ್ಸಾ ಕೊಠಡಿ ನಿರ್ಮಿಸಲಾಗಿದೆ ಎಂದರು.

ಈ ರೀತಿಯ ಶಸ್ತ್ರ ಚಿಕಿತ್ಸೆಗೆ 8 ತಿಂಗಳಿಂದ 1 ವರ್ಷದ ವರೆಗೆ ಮಕ್ಕಳ ಶ್ರವಣೇಂದ್ರಿಯ, ಮೌಖಿಕ ಚಿಕಿತ್ಸೆಯ ಅಗತ್ಯ ಇರುತ್ತದೆ. ಶ್ರವಣ ಮತ್ತು ಮಾತನಾಡುವ ವಿಧಾನವನ್ನು ಕಲಿಸಲು ಶ್ರವಣಶಾಸ್ತ್ರಜ್ಞರೊಂದಿಗೆ ನಿರಂತರ ಸೆಷನ್‌ಗಳನ್ನು ಮಾಡಲಾಗುತ್ತದೆ.

ಶ್ರವಣೇಂದ್ರಿಯ ಮೌಖಿಕ ಚಿಕಿತ್ಸೆಯ ಅವಧಿಯಲ್ಲಿ ರೋಗಿಗಳಿಗೆ ಪ್ರಯಾಣದ ಶುಲ್ಕವನ್ನು ಸರ್ಕಾರವೇ ಉಚಿತವಾಗಿ ಭರಿಸಲಿದೆ. ಕಾಕ್ಲೆಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆಯನ್ನು ಕಿವಿ ಕೇಳಿಸಿದ ಎಲ್ಲ ವಯಸ್ಸಿನವರಿಗೂ ಮಾಡಬಹುದಾಗಿದೆ. ಇದಕ್ಕೆ ಸುಮಾರು 15 ಲಕ್ಷ ರು. ವೆಚ್ಚವಾಗುತ್ತದೆ ಎಂದು ತಿಳಿಸಿದರು.

ಶ್ರೀ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದ ಪ್ರಾಂಶುಪಾಲ ಡಾ. ಅರವಿಂದ ಪಾಟೀಲ, ಡಾ.ಲತಾ ದೇವಿ, ಡಾ.ರವೀಂದ್ರ ಕರಡಿ, ಪ್ರಧಾನ ವೈದ್ಯಕೀಯ ಅಧೀಕ್ಷಕ ಡಾ.ರಾಜೇಶ ಹೊನ್ನುಟಗಿ ಇದ್ದರು.



ಹುಟ್ಟು ಕಿವುಡುತನ, ಎರಡು ವರ್ಷದೊಳಗೆ ಚಿಕಿತ್ಸೆ ನೀಡಿದರೆ ಆ ಮಗುವಿನ ಮೆದುಳು ಅಭಿವೃದ್ಧಿಯಾಗಲು ಸಾಧ್ಯ. ಸಮಗ್ರ ತಪಾಸಣೆ ನಡೆಸಲಾಗುತ್ತದೆ. ಮಗು ಮೂರು ವರ್ಷದಲ್ಲಿ ಮಾತು ಕಲಿತು ಸಮಾಜಮುಖಿ ಆಗಲು ಸಾಧ್ಯ. ಕಾಕ್ಲೀಯಾರ್ ಇಂಪ್ಲಾಂಟ್ ಇದೊಂದು ಅತ್ಯಾಧುನಿಕ ಶ್ರವಣ ಸಾಧನ. ಈ ಶಸ್ತ್ರಚಿಕಿತ್ಸೆ ಸಂಕೀರ್ಣವಾಗಿದ್ದರೂ ಅಪಾಯಕಾರಿಯಲ್ಲ. 8 ತಿಂಗಳಿಂದ 80 ವರ್ಷದ ವಯಸ್ಸಿನವರಿಗೂ ಮಾಡಬಹುದು. ಶಸ್ತ್ರಚಿಕಿತ್ಸೆ ನಂತರ ಒಂದು ವರ್ಷದವರೆಗೆ ವಾಕ್ ಶ್ರವಣ ತಜ್ಞರು ತಾಯಿ-ಮಗುವಿಗೆ ತರಬೇತಿ ನೀಡುತ್ತಾರೆ.

–ಡಾ.ಲತಾದೇವಿ

PAPER NAME : VISHWA VANI Date : 21/11/2024

# BLDE (DEEMED TO BE UNIVERSITY)

[

## SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA

**Department of Central Library**

ಪರಿಹಾರ... ಈ ಶಸ್ತ್ರಚಿಕಿತ್ಸೆಯಿಂದ ಶೇ.90 ರಷ್ಟು ಗುಣವಾಗುವ ಸಾಧ್ಯತೆ। ಅನುವಂಶೀಯ, ಇನ್‌ಫೆಕ್ಷನ್ ದೋಷ: ಡಾ.ಮುಧೋಳ

# ಶ್ರವಣದೋಷವುಳ್ಳ ಮಕ್ಕಳಿಗೆ ಕಾಕ್ಲಿಯರ್ ಶಸ್ತ್ರಚಿಕಿತ್ಸೆ

• **ಕನ್ನಡಪ್ರಭ ವಾರ್ತೆ** ವಿಜಯಪುರ

ನಗರದ ಬಿಎಲ್‌ಡಿಇ ಸಂಸ್ಥೆಯ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದಲ್ಲಿ ಇದೇ ಮೊದಲ ಬಾರಿಗೆ ಶ್ರವಣದೋಷಯುಕ್ತ ಮಕ್ಕಳಿಗಾಗಿ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಸೌಲಭ್ಯ ಪ್ರಾರಂಭಿಸಲಾಗಿದೆ ಎಂದು ಉಪಕುಲಪತಿ ಡಾ.ಆರ್.ಎಸ್.ಮುಧೋಳ ಹೇಳಿದರು.

ನಗರದ ಆಸ್ಪತ್ರೆಯ ಟ್ರಾಮಾ ಸೆಂಟರ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಇತ್ತೀಚೆಗೆ ಜನಿಸುತ್ತಿರುವ ಪ್ರತಿ ಒಂದು ಸಾವಿರ ಮಕ್ಕಳಲ್ಲಿ ಕನಿಷ್ಠ ಎರಡು ಮಕ್ಕಳಿಗೆ ಹುಟ್ಟಿನಿಂದಲೇ ಶ್ರವಣದೋಷ ಉಂಟಾಗುತ್ತಿದೆ. ಅನುವಂಶೀಯವಾಗಿ, ಸಂಬಂಧಿಕರಲ್ಲಿ ವಿವಾಹ, ಹುಟ್ಟುವಾಗ ಇನ್ಫೆಕ್ಷನ್ ಸೇರಿದಂತೆ ನಾನಾ ಕಾರಣಗಳಿಗಾಗಿ ಮಕ್ಕಳಲ್ಲಿ ಶ್ರವಣದೋಷ ಕಂಡುಬರುತ್ತದೆ. ಅಂತಹ ಮಕ್ಕಳಿಗೆ ಮಾತು ಬರುವುದಿಲ್ಲ, ಕಿವಿ ಕೇಳಿಸುವುದಿಲ್ಲ. ಇದನ್ನು ಮಗು ಹುಟ್ಟಿದ ಆರು ತಿಂಗಳ ಒಳಗೆ ಕಂಡುಹಿಡಿದು ಅಂತಹ ಮಕ್ಕಳಿಗೆ ಕಾಕ್ಲಿಯರ್‌ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಮಾಡಿದರೆ ಶೇ.90ರಷ್ಟು ಗುಣವಾಗುವ ಸಾಧ್ಯತೆ ಇದೆ ಎಂದರು.



ಇದೀಗ ಬಿಎಲ್‌ಡಿಇ ಆಸ್ಪತ್ರೆಯಲ್ಲಿ ಕಾಕ್ಲಿಯರ್‌ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಮಾಡಲು ರಾಜ್ಯ ಸರ್ಕಾರದಿಂದ ಅನುಮತಿ ದೊರೆತಿದೆ. ಸಮಾಜದಲ್ಲಿನ ಬಡಜನತೆ ತಮ್ಮ ಮಕ್ಕಳಿಗೆ ಸಮಸ್ಯೆಗಳು ಬಂದಾಗ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಎಂಬ ಸರ್ಕಾರಿ ಯೋಜನೆ ಮೂಲಕ ಉಚಿತವಾಗಿ ಈ ಚಿಕಿತ್ಸೆ ಕೊಡಿಸಬಹುದು ಎಂದು ತಿಳಿಸಿದರು.

ಕಾಕ್ಲಿಯರ್‌ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಮಾಡುವ ಬಿಎಲ್‌ಡಿಇ ಆಸ್ಪತ್ರೆ ಉತ್ತರ ಕರ್ನಾಟಕದಲ್ಲಿ 2ನೇ ಸೆಂಟರ್‌ಆಗಿದೆ. ಹುಟ್ಟಿನಿಂದ ಕಿವಿ ಕೇಳದ ಮಕ್ಕಳಿಗೆ ಮೊದಲನೇ 6 ರಿಂದ 9 ತಿಂಗಳವರೆಗೆ ಕಂಡುಹಿಡಿದು ಅವರಿಗೆ ಈ ಚಿಕಿತ್ಸೆಯನ್ನು ನೀಡಿದಲ್ಲಿ ಯಶಸ್ವಿಯಾಗಲಿದೆ. ಕೇವಲ 45 ನಿಮಿಷದಲ್ಲಿ ಈ ಶಸ್ತ್ರಚಿಕಿತ್ಸೆ ಮಾಡಲಾಗುವುದು. ಆ ಬಳಿಕ 6 ರಿಂದ 8 ತಿಂಗಳವರೆಗೆ ಆ ಮಕ್ಕಳಿಗೆ ಮಾರ್ಗದರ್ಶನ ಕೊಡುವ ಮೂಲಕ ಸಮಸ್ಯೆ ಸರಿಪಡಿಸಬಹುದು ಎಂದು ತಿಳಿಸಿದರು.

> **ಅನುವಂಶೀಯವಾಗಿ, ಸಂಬಂಧಿಕರಲ್ಲಿ ವಿವಾಹ, ಹುಟ್ಟುವಾಗ ಇನ್ಫೆಕ್ಷನ್ ಸೇರಿದಂತೆ ವಿವಿಧ ಕಾರಣಗಳಿಂದ ಮಕ್ಕಳಲ್ಲಿ ಶ್ರವಣದೋಷ ಕಂಡುಬರುತ್ತದೆ. ಆ ಮಕ್ಕಳಿಗೆ ಮಾತು ಬರುವುದಿಲ್ಲ, ಕಿವಿ ಕೇಳಿಸುವುದಿಲ್ಲ. ಮಗು ಹುಟ್ಟಿದ ಆರು ತಿಂಗಳ ಒಳಗೆ ಕಂಡುಹಿಡಿದು ಅಂತಹ ಮಕ್ಕಳಿಗೆ ಕಾಕ್ಲಿಯರ್‌ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಮಾಡಿದರೆ ಶೇ.90ರಷ್ಟು ಗುಣವಾಗುವ ಸಾಧ್ಯತೆ ಇದೆ.**
>
> • **ಡಾ.ಆರ್.ಎಸ್.ಮುಧೋಳ**
> ಉಪಕುಲಪತಿ

ಡಾ.ಎಚ್.ಟಿ.ಲತಾದೇವಿ ಮಾತನಾಡಿ, ಹುಟ್ಟಿದ 8 ತಿಂಗಳ ಮಗುವಿನಿಂದ 80 ವರ್ಷದವರೆಗಿನ ಎಲ್ಲರಿಗೂ ಈ ಚಿಕಿತ್ಸೆ ಲಭ್ಯವಿರುತ್ತದೆ. ಆದರೆ, 6 ವರ್ಷದೊಳಗಿನ ಮಕ್ಕಳಿಗೆ ಸರ್ಕಾರದಿಂದ ಆರ್ಥಿಕ ಸಹಾಯ ಸಿಗುವುದರಿಂದ ಉಚಿತವಾಗಿ ಮಕ್ಕಳನ್ನು ಗುಣಪಡಿಸಬಹುದಾಗಿದೆ. ಮಕ್ಕಳಿಗೆ ಕಾಕ್ಲಿಯರ್‌ಇಂಪ್ಲಾಂಟ್ ನನಡೆಸಿದ ಬಳಿಕ ವಾಕ್ ಮತ್ತು ಶ್ರವಣ ತಜ್ಞರಿಂದ ಒಂದೊಂದು ವರ್ಷ ಕೊಡುವ ಆಡಿಟರಿ ವರ್ಬಲ್ ಥೆರೆಫಿ ತರಬೇತಿಯೂ ಮಕ್ಕಳಿಗೆ ಅಗತ್ಯವಿದೆ. ಶ್ರವಣ ಸಮಸ್ಯೆ ಇರುವ ಮಕ್ಕಳಿಗಾಗಿ ಬಿಎಲ್‌ಡಿಇ ಆಸ್ಪತ್ರೆಯಲ್ಲಿ ಎಲ್ಲ ಸೌಲಭ್ಯಗಳು ಇದ್ದು, ಈ ಭಾಗದ ಜನರು ಸದುಪಯೋಗ ಪಡೆಸಿಕೊಳ್ಳ ಬೇಕು ಎಂದು ಹೇಳಿದರು. ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಹೇಗೆ ಮಾಡಲಾಗುತ್ತದೆ, ಮಕ್ಕಳ ಕಿವಿಯ ಹಿಂಭಾಗದಲ್ಲಿ ಹೇಗೆ ಈ ಮಶೀನ್ ಅಳವಡಿಸಲಾಗುತ್ತದೆ. ಚಿಕ್ಕ ಮಕ್ಕಳಿರುವಾಗಲೇ ಆಳವಾಗಿ ಕಿವಿ ಕೇಳದ ಮಕ್ಕಳನ್ನು ಹೇಗೆ ಎಲ್ಲರಂತೆ ಮಾಡಲು ಸಹಾಯವಾಗುತ್ತದೆ ಎಂಬುದನ್ನು ಪರದೆಯ ಮೇಲೆ ವಿವರವಾಗಿ ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪ್ರಾಚಾರ್ಯ ಡಾ.ಅರವಿಂದ ಪಾಟೀಲ, ಪ್ರಧಾನ ವೈದ್ಯಕೀಯ ಅಧೀಕ್ಷಕ ಡಾ.ರಾಜೇಶ ಹೊನ್ನುಟಗಿ, ಡಾ.ರವಿಂದ್ರ ಕರಡಿ ಉಪಸ್ಥಿತರಿದ್ದರು.

**PAPER NAME : KANNADA PRABHA Date : 22/11/2024**

# BLDE (DEEMED TO BE UNIVERSITY)

[

**SHRI. B. M. PATIL MEDICAL COLLEGE, HOSPITAL & RESEARCH CENTRE, VIJAYAPURA**

**Department of Central Library**



ವಿಜಯಪುರ ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಕಾನೂನು ಮಹಾವಿದ್ಯಾಲಯದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ರಾಷ್ಟ್ರಪಿತಾಮಹ ಮಹಾತ್ಮ ಗಾಂಧೀಜಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಸಂವಿಧಾನ ದಿನ ಆಚರಿಸಲಾಯಿತು. ಪ್ರಾಚಾರ್ಯ ಡಾ. ರಘುವೀರ ಕುಲಕರ್ಣಿ, ಅಧ್ಯಾಪಕಿ ಸನಾ ಮುಗಳ್ಯೆ, ಸಹಾಯಕ ಪ್ರಾಧ್ಯಾಪಕ ಶೇಷಾದ್ರಿ ಕೆ., ಸಹಾಯಕ ಪ್ರಾಧ್ಯಾಪಕಿ ಲಾವಣ್ಯಾ ಕುಲಕರ್ಣಿ, ಮಂಜುನಾಥ ಸಂಗೊಳ್ಳಿ ಇತರರಿದ್ದರು.

VK 28/11/24

PAPER NAME : VIJAYA KARNATAKA DATE : 28/11/2024